ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ 1973

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟವಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ, 1973

# ಮತ್ತು

# ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ನಿಯಮಗಳು, 1975

**ಕರ್ನಾಟಕ ಸರ್ಕಾರ**

ಕ್ರಮಾಂಕ: ಲಾ 142 ಎಲ್.ಎಂಪಿ. 85.

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 14.1.1998

**ಅಧಿಸೂಚನೆ**

ಕರ್ನಾಟಕ ರಾಜಭಾಷಾ ಅಧಿನಿಯಮ 1963 (ಕರ್ನಾಟಕ ಅಧಿನಿಯಮ 1963ರ26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಎ.ಎನ್. ಬ್ಯಾನರ್ಜಿ, ಆದ ನಾನು ಕನ್ನಡ ಭಾಷೆಯಲ್ಲಿರುವ ಕರ್ನಾಟಕ ಕೊಳಚೆ ಪ್ರವೇಶಗಳ (ಮೇಲ್ವಾಟು ಮತ್ತು ನಿರ್ಮೂಲನ) ಅಧಿನಿಯಮ, 1973–ಇದು ಸರ್ಕಾರಿ ರಾಜಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಲಿಂಗಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ,
(ಆಡಳಿತ–2)

## ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ, 1973

### ಪ್ರಕರಣಗಳ ಅನುಕ್ರಮಣಿಕೆ


**ಅಧ್ಯಾಯ I**

**ಪ್ರಾರಂಭಿಕ**

| ಪ್ರಕರಣಗಳು | | ಪುಟಗಳು |
|---|---|---|
| 1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | ... | 1 |
| 2. ಪರಿಭಾಷೆಗಳು | ... | 2 |

**ಅಧ್ಯಾಯ II**

**ಕೊಳಚೆ ಪ್ರದೇಶಗಳ ಘೋಷಣೆ**

| | | |
|---|---|---|
| 3. ಕೊಳಚೆ ಪ್ರದೇಶಗಳ ಘೋಷಣೆ | ... | 4 |

**ಅಧ್ಯಾಯ III**

**ಕೊಳಚೆ ಪ್ರದೇಶಗಳ ಬೆಳವಣಿಗೆಯನ್ನು ತಡೆಗಟ್ಟುವುದು**

| | | |
|---|---|---|
| 4. ಕೊಳಚೆ ಪ್ರದೇಶಗಳಲ್ಲಿ ಕಟ್ಟಡಗಳ ನೋಂದಣಿ | ... | 5 |
| 5. ಕೊಳಚೆ ಪ್ರದೇಶಗಳಲ್ಲಿ ಕಟ್ಟಡ ಮುಂತಾದವುಗಳ ಮೇಲೆ ಪರಿಬಂಧ | ... | 6 |

**ಅಧ್ಯಾಯ III ಕ**

**ಅನಧಿಕೃತ ನಿರ್ಮಾಣಗಳ ನಿಷೇಧ**

| | | |
|---|---|---|
| 5ಕ. ಅನ್ವಯ | ... | 7 |
| 5ಖ. ಪೂರ್ವಾನುಮತಿ ಇಲ್ಲದೆ, ಕಟ್ಟಡಗಳ ನಿರ್ಮಾಣದ ನಿಷೇಧ | ... | 7 |
| 5ಗ. ಕಾನೂನುಬಾಹಿರವಾಗಿ ಪ್ರಾರಂಭಿಸಿದ, ಕಟ್ಟುತ್ತಿರುವ ಅಥವಾ ಪೂರ್ಣಗೊಳಿಸಿದ ಕಟ್ಟಡಗಳನ್ನು ಕೆಡವಿ ಹಾಕುವುದು. | ... | 8 |
| 5ಘ. 1976ರ ಕರ್ನಾಟಕ ಪೌರಸಭಾ ನಿಗಮ ಅಧಿನಿಯಮ ಮತ್ತು ಇತರ ಕಾನೂನುಗಳು ಬಾಧಕವಾಗತಕ್ಕದಲ್ಲ. | ... | 9 |

**ಅಧ್ಯಾಯ IV**

**ಕೊಳಚೆ ಪ್ರದೇಶಗಳ ಮೇಲ್ಪಾಟು**

| | | |
|---|---|---|
| 6. ಕೊಳಚೆ ಪ್ರದೇಶಗಳಲ್ಲಿ ಮೇಲ್ಪಾಟಿನ ಕಾಮಗಾರಿಗಳ ನಿರ್ವಹಣೆಯನ್ನು ಅಗತ್ಯಪಡಿಸಲು ನಿಯಮಿಸಿದ ಪ್ರಾಧಿಕಾರದ ಅಧಿಕಾರ | ... | 9 |
| 7. ಕೊಳಚೆ ಪ್ರದೇಶದ ಮೇಲ್ಪಾಟಿನ ಕಾಮಗಾರಿಗಳನ್ನು ನಿರ್ವಹಿಸಲು ಮತ್ತು ವೆಚ್ಚವನ್ನು ವಸೂಲು ಮಾಡಲು ಅಧಿಕಾರ | ... | 10 |
| 8. ಮೇಲ್ಪಾಟು ಕಾಮಗಾರಿಗಳ ನಿರ್ವಹಣೆಯ ವೆಚ್ಚಗಳು ಇತ್ಯಾದಿಗಳನ್ನು ಭೂಮಿ ಅಥವಾ ಕಟ್ಟಡದ ಅಧಿಭೋಗದಾರರಿಂದ ವಸೂಲೀಯವಾಗತಕ್ಕದ್ದು. | ... | 10 |
| 9. ಮನುಷ್ಯ ವಾಸಕ್ಕೆ ಅಯೋಗ್ಯವಾದ ಕಟ್ಟಡವನ್ನು ಕೆಡವಿ ಹಾಕುವ ಆದೇಶವನ್ನು ಮಾಡಲು ನಿಯಮಿಸಿದ ಪ್ರಾಧಿಕಾರದ ಅಧಿಕಾರ | ... | 11 |

10. ಕಟ್ಟಡವನ್ನು ಕೆಡವಿ ಹಾಕಬೇಕೆಂಬ ಆದೇಶವನ್ನು ಮಾಡಿರುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ... 11

**ಅಧ್ಯಾಯ V**

**ಕೊಳಚೆ ಪ್ರದೇಶಗಳ ನಿರ್ಮೂಲನ ಮತ್ತು ಪುನರಭಿವೃದ್ಧಿ**

11. ಯಾವುದೇ ಕೊಳಚೆ ಪ್ರದೇಶವನ್ನು ಕೊಳಚೆ ನಿರ್ಮೂಲನಾ ಪ್ರದೇಶವೆಂದು ಘೋಷಿಸಲು ಅಧಿಕಾರ ... 12

12. ಪ್ರದೇಶವನ್ನು ನಿರ್ಮೂಲಗೊಳಿಸಲು ಮತ್ತು ಕಟ್ಟಡವನ್ನು ಕೆಡವಿ ಹಾಕಲು ಹೊಣೆಗಾರಿಕೆ ... 12

13. ಕೊಳಚೆ ನಿರ್ಮೂಲನ ಪ್ರದೇಶಗಳನ್ನು ನಿರ್ಮೂಲ ಮಾಡುವ ಅಧಿಕಾರ ... 12

14. ಒಡೆಯನು ಪುನರಭಿವೃದ್ಧಿಪಡಿಸಬಹುದು ... 13

15. ನಿರ್ಮೂಲನಾ ಪ್ರದೇಶವನ್ನು ಪುನರಭಿವೃದ್ಧಿಗೆ ನಿಯಮಿಸಿದ ಪ್ರಾಧಿಕಾರದ ಅಧಿಕಾರ ... 13

16. ಹಿಂದಿನ ಅಧಿಭೋಗದಾರರಿಗೆ ವರ್ಗಾವಣೆಗಾಗಿ ಉಪಬಂಧಿಸಲು ನಿಯಮಗಳು ... 14

**ಅಧ್ಯಾಯ VI**

**ಭೂಮಿಯ ಅರ್ಜನೆ**

17. ಭೂಮಿಯನ್ನು ಅರ್ಜಿಸಲು ಅಧಿಕಾರ ... 14

18. ಅರ್ಜಿಸಿದ ಭೂಮಿಯ ಎಲ್ಲ ಅಧಿಭಾರಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗತಕ್ಕದು ... 14

19. ಮೊಬಲಗನ್ನು ಸ್ವೀಕರಿಸಲು ಹಕ್ಕು ... 14

20. ಸಂದಾಯ ಮಾಡಬೇಕಾದ ಮೊಬಲಗು ... 15

21. ಮೊಬಲಗನ್ನು ನಿಗದಿಪಡಿಸುವ ಆದೇಶದ ವಿರುದ್ಧ ಅಪೀಲು ... 15

22. ಮೊಬಗಲಿನ ಹಂಚಿಕೆ ... 15

23. ಮೊಬಲಗಿನ ಸಂದಾಯ ... 15

24. ಬಡ್ಡಿಯ ಸಂದಾಯ ... 16

25. ಉಚ್ಚನ್ಯಾಯಾಲಯಕ್ಕೆ ಅಪೀಲು ... 16

26. ಮೊಬಲಗಿನ ನಿರ್ಧರಣೆಗೆ ಸಂಬಂಧಿಸಿದಂತೆ ನಿಯಮಿಸಿದ ಪ್ರಾಧಿಕಾರದ ಅಧಿಕಾರ ... 16

27. ಅರ್ಜಿಸಿದ ಭೂಮಿಯ ಉಪಯೋಗ ... 16

**ಅಧ್ಯಾಯ VII**

**ಹೊರ ಹಾಕುವುದರಿಂದ ಕೊಳಚೆ ಪ್ರದೇಶಗಳಲ್ಲಿಯ ಬಾಡಿಗೆದಾರರನ್ನು ರಕ್ಷಿಸುವುದು**

28. ನಿಯಮಿಸಿದ ಪ್ರಾಧಿಕಾರದ ಅನುಮತಿ ಇಲ್ಲದೆ ಬಾಡಿಗೆದಾರರನ್ನು ಹೊರ ಹಾಕುವುದಕ್ಕಾಗಿ ವ್ಯವಹರಣೆಗಳನ್ನು ತೆಗೆದುಕೊಳ್ಳತಕ್ಕುದಲ್ಲ ... 17

29. ಅನುಮತಿಯನ್ನು ನಿರಾಕರಿಸುವ ಆದೇಶದ ವಿರುದ್ಧ ಅಪೀಲು ... 18

30. ಬಾಡಿಗೆದಾರನು ಖಾಲಿ ಮಾಡಿದ ಆವರಣದ ಸ್ವಾಧೀನತೆಯನ್ನು ತಿರುಗಿ ಕೊಡುವುದು ... 18

31. ಕೊಳಚೆ ಪ್ರದೇಶದಲ್ಲಿಯ ಕಟ್ಟಡಗಳ ಬಾಡಿಗೆ ... 19

32. ಕೆಲವು ಕಟ್ಟಡಗಳ ಬಾಡಿಗೆದಾರರಿಗೆ ಈ ಅಧ್ಯಾಯವು ಅನ್ವಯವಾಗತಕ್ಕುದಲ್ಲ ... 21

**ಅಧ್ಯಾಯ VIII**

**ಮೈಸೂರು ಕೊಳಚೆ ನಿರ್ಮೂಲನಾ ಮಂಡಳಿ**

33. ಮೈಸೂರು ಕೊಳಚೆ ನಿರ್ಮೂಲನಾ ಮಂಡಳಿಯ ಸ್ಥಾಪನೆ ... 21

34. ಮಂಡಲಿಯ ರಚನೆ ... 21

35. ಖಾಲಿಯಾದ ಸ್ಥಾನವು ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ ... 21

36. ಅಧ್ಯಕ್ಷ ಮತ್ತು ಇತರ ಸದಸ್ಯರುಗಳ ಸೇವಾ ಷರತ್ತುಗಳು ... 22

37. ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ... 22

38. ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ... 22

39. ಸದಸ್ಯರು, ಅಧಿಕಾರಿಗಳು ಮತ್ತು ನೌಕರರ ಸಾಮಾನ್ಯ ಅನರ್ಹತೆ ... 22

40. ಮಂಡಲಿಯ ಪ್ರಕಾರ್ಯಗಳು ... 22

41. ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ ... 22

42. ಕೆಲವು ಸಂದರ್ಭಗಳಲ್ಲಿ ಯಾವುದೇ ಅನರ್ಹತೆ ಇರತಕ್ಕುದಲ್ಲ ... 22

43. ವಿನಿಯಮಗಳನ್ನು ರಚಿಸಲು ಮಂಡಲಿಯ ಅಧಿಕಾರ ... 23

44. ಮಂಡಲಿಯು ಸರ್ಕಾರದ ನಿರ್ದೇಶನಗಳನ್ನು ಪಾಲಿಸತಕ್ಕುದು ... 23

45. ರಾಜ್ಯ ಗೃಹನಿರ್ಮಾಣ ಮಂಡಲಿಯ ಅಧಿಕಾರಿಗಳು ಕೊನೆಗೊಳ್ಳತಕ್ಕುದು ... 23

46. ಮಂಡಲಿಗೆ ರಾಜ್ಯ ಗೃಹನಿರ್ಮಾಣ ಮಂಡಲಿಯ ಕೆಲವು ಆಸ್ತಿಗಳ ಮತ್ತು 23
ಹೊಣೆಗಾರಿಕೆಗಳ ವರ್ಗಾವಣೆ ... 23

47. ಕೆಲವು ಕರಾರುಗಳು ಮತ್ತು ಒಪ್ಪಂದಗಳನ್ನು ಮಂಡಲಿಯು ಜಾರಿಗೊಳಿಸತಕ್ಕುದು. ... 23

48. ರಾಜ್ಯ ಗೃಹ ನಿರ್ಮಾಣ ಮಂಡಲಿಯಿಂದ ಮಂಡಲಿಗೆ ನಿರ್ದಿಷ್ಟ
ಮೊಬಲಗಿನ ಸಂದಾಯ ... 24

**ಅಧ್ಯಾಯ IX**

**ಸಂಕೀರ್ಣ**

49. ನಿಯಮಿಸಿದ ಪ್ರಾಧಿಕಾರದ ಅಧಿಕಾರಗಳನ್ನು ಮಂಡಲಿಯು ಚಲಾಯಿಸತಕ್ಕುದು ... 24

50. ನೋಟೀಸುಗಳ ಮತ್ತು ಆದೇಶಗಳ ಜಾರಿ ... 24

51. ಪ್ರವೇಶಾಧಿಕಾರಿಗಳು ... 25

52. ಪರಿಶೀಲನಾ ಅಧಿಕಾರ ... 25

53. ಕಾಮಗಾರಿಯು ನಡೆಯುತ್ತಿರುವ ಭೂಮಿಗೆ ಹೊಂದಿಕೊಂಡಿರುವ ಭೂಮಿಯನ್ನು
ಪ್ರವೇಶಿಸಲು ಅಧಿಕಾರ ... 26

54. ಕಟ್ಟಡದೊಳಗೆ ಪ್ರವೇಶಿಸಲು ಅಧಿಕಾರ ... 26

55. ಹಗಲು ಹೊತ್ತಿನಲ್ಲಿ ಪ್ರವೇಶವನ್ನು ಮಾಡುವುದು ... 27

| | | | |
|---|---|---|---|
| 56. | ಅಧಿಭೋಗದಾರನ ಸಮ್ಮತಿಯನ್ನು ಸಾಮಾನ್ಯವಾಗಿ ಪಡೆಯತಕ್ಕುದು | ... | 27 |
| 57. | ಹೊರದೂಡುವ ಅಧಿಕಾರ | ... | 27 |
| 58. | ಕೊಳಚೆ ಪ್ರದೇಶಗಳಿಂದ ಅಪಾಯಕಾರಿ ಅಥವಾ ಅಸಹ್ಯಕರ ವ್ಯಾಪಾರಗಳನ್ನು ತೆಗೆದುಹಾಕಲು ಅಧಿಕಾರ | ... | 27 |
| 59. | ಅಪೀಲು | ... | 28 |
| 60. | ಕೆಲವು ಪ್ರಕರಣಗಳಲ್ಲಿ ಕಟ್ಟಡಗಳನ್ನು ಕೆಡವಿ ಹಾಕವುದಕ್ಕಾಗಿ ಆದೇಶ | ... | 28 |
| 61. | ಕೆಡವಿ ಹಾಕಲಾದ ಸಾಮಗ್ರಿಗಳ ಮಾರಾಟ, ಉತ್ಪತ್ತಿಗಳ ವಿಲೆ ಮತ್ತು ವೆಚ್ಚಗಳ ವಸೂಲಿ | ... | 29 |
| 62. | ದಂಡನೆಗಳು | ... | 29 |
| 63. | ಕಂಪನಿಗಳಿಂದ ಅಪರಾಧಗಳು | ... | 30 |
| 64. | ಪ್ರಾಸಿಕ್ಯೂಷನ್ ಮತ್ತು ಅಪರಾಧಗಳ ಅಧಿವಿಚಾರಣೆ | ... | 30 |
| 65. | ಅಪರಾಧಗಳ ರಾಜಿ | ... | 30 |
| 66. | ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪರಿಷೇಧ | ... | 31 |
| 67. | ನಿಯಮಿಸಿದ ಪ್ರಾಧಿಕಾರ ಮುಂತಾದವರು ಲೋಕನೌಕರರಾಗಿರತಕ್ಕುದು | ... | 31 |
| 68. | ಸದ್ಭಾವನೆಯಿಂದ ಕೈಕೊಂಡ ಕ್ರಮದ ಸಂರಕ್ಷಣೆ | ... | 31 |
| 69. | ಸರ್ಕಾರದ ಅಧಿಕಾರಿಗಳ ಪ್ರತ್ಯಾಯೋಜನೆ | ... | 31 |
| 70. | ಅಧಿನಿಯಮವು ಇತರ ಕಾನೂನುಗಳನ್ನು ಅಧ್ಯಾರೋಹಿಸತಕ್ಕುದು | ... | 32 |
| 71. | ನಿಯಮ ರಚನಾಧಿಕಾರ | ... | 32 |
| 72. | ಇತ್ಯರ್ಥದಲ್ಲಿರುವ ಅರ್ಜನೆಯ ಕೆಲವು ಪ್ರಕರಣಗಳಿಗೆ ಅಧಿನಿಯಮದ ಅನ್ವಯ | ... | 32 |
| 73. | ನಿಯಮಗಳು ಮತ್ತು ಅಧಿಸೂಚನೆಯನ್ನು ಇಡುವುದು | ... | 33 |
| 74. | ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ನಿಯಮಗಳು 1975 | ... | 34 |

**1974ರ ಕರ್ನಾಟಕ ಅಧಿನಿಯಮ ಸಂಖ್ಯೆ 38**

(1974ನೇ ಅಕ್ಟೋಬರ್ ಏಳನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ, 1973

(1978ರ ಅಧಿನಿಯಮ, 21 ಮತ್ತು 1981ರ ಅಧಿನಿಯಮ, 19ರ ಮೂಲಕ ತಿದ್ದುಪಡಿ ಮಾಡಲಾಗಿದೆ)

(1974ನೇ ಅಕ್ಟೋಬರ್ ಒಂದನೇ ದಿನದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಕೊಳಚೆ ಪ್ರದೇಶದಲ್ಲಿ ಮೇಲ್ಪಾಟು ಮತ್ತು ನಿರ್ಮೂಲನೆಯನ್ನು ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಕೆಲವು ಪ್ರದೇಶಗಳಲ್ಲಿ ಕೊಳಚೆ ಪ್ರದೇಶಗಳ ಸಂಖ್ಯೆಯು ಹೆಚ್ಚುತ್ತಿದ್ದು, ಮತ್ತು ಸದರಿ ಪ್ರದೇಶಗಳು ಸಾರ್ವಜನಿಕ ಆರೋಗ್ಯ ಹಾಗೂ ನೈರ್ಮಲ್ಯತೆಗೆ ಅಪಾಯಕಾರಿ ಮೂಲವಾಗಿರುವುದರಿಂದ;

ಮತ್ತು ಈಗಿರುವ ಕಾನೂನಿನ ಮೇರೆಗೆ ಈ ಹೆಚ್ಚಳವನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು, ಸಂದಣಿಯನ್ನು ತೆಗೆದುಹಾಕಲು ಹಾಗೂ ಬೀದಿಗಳು, ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯಂಥ ಮೂಲಭೂತ ಅಗತ್ಯತೆಗಳನ್ನು ಒದಗಿಸಲು, ಮತ್ತು ಮನುಷ್ಯ ವಾಸಕ್ಕೆ ಅಯೋಗ್ಯವಾಗಿರುವಂಥ ಕೊಳಚೆ ಪ್ರದೇಶಗಳನ್ನು ನಿರ್ಮೂಲನೆಗೊಳಿಸಲು ಸಾಧ್ಯವಿಲ್ಲದಿರುವುದರಿಂದ;

ಮತ್ತು ಈ ತೊಂದರೆಯನ್ನು ನಿವಾರಿಸಲು ಕೊಳಚೆ ಪ್ರದೇಶಗಳಲ್ಲಿರುವ ಅನಾರೋಗ್ಯಕರ ಮತ್ತು ಅನೈರ್ಮಲ್ಯಕರ ಸ್ಥಿತಿಗಳನ್ನು ನಿವಾರಿಸಲು ಕೊಳಚೆ ಪ್ರದೇಶದಲ್ಲಿ ವಾಸಿಸುವವರಿಗೆ ಉತ್ತಮ ಸ್ಥಳವಕಾಶ ಮತ್ತು ಸುಧಾರಿತ ಜೀವನ ಸ್ಥಿತಿಗತಿಗಳಿಗಾಗಿ, ಸಾಮಾನ್ಯವಾಗಿ ಸಾರ್ವಜನಿಕ ಆರೋಗ್ಯವನ್ನು ಉತ್ತಮಪಡಿಸುವುದಕ್ಕಾಗಿ ಮತ್ತು ಕೊಳಚೆ ಪ್ರದೇಶಗಳ ಮೇಲ್ಪಾಟು, ಅಭಿವೃದ್ಧಿ ಅಥವಾ ಪುನರ್ ಅಭಿವೃದ್ಧಿಗೊಳಿಸುವ, ಕೊಳಚೆ ಪ್ರದೇಶದ ನಿರ್ಮೂಲನೆ ಮತ್ತು ಕೊಳಚೆ ಪ್ರದೇಶಗಳ ಮೇಲ್ಪಾಟು ಮತ್ತು ಕೊಳಚೆ ಪ್ರದೇಶಗಳ ನಿವಾಸಿಗಳ ಪುನರ್ವಸತಿಯ ಉದ್ದೇಶಕ್ಕಾಗಿ ಭೂಮಿಯನ್ನು ಆರ್ಜಿಸುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಮತ್ತು ರಾಜ್ಯನೀತಿಯ ನಿರ್ದೇಶನ ತತ್ವವಾಗಿ ರಾಜ್ಯವು ಜನಾರೋಗ್ಯವನ್ನು ಅಭಿವೃದ್ಧಿಪಡಿಸಬೇಕೆಂದು ಭಾರತ ಸಂವಿಧಾನವು ವಿಧಿಸಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.–

**ಅಧ್ಯಾಯ–I**

**ಪ್ರಾರಂಭಿಕ**

**1. ಚಿಕ್ಕ ಹೆಸರು ವ್ಯಾಪ್ತಿ ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನೆ) ಅಧಿನಿಯಮ, 1973 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಕ) "ಮಂಡಲಿ" ಎಂದರೆ 33ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿ;

(ಖ) "ಕಟ್ಟಡ"ವು ಮನೆ, ಔಟ್ ಹೌಸ್, ಲಾಯ, ಕಕ್ಕಸ್ಸು, ಶೆಡ್ಡು, ಗುಡಿಸಲು, ಗೋಡೆ ಮತ್ತು ಯಾವುದೇ ಇತರ ಅಂಥ ರಚನೆ, ಅದು ಕಲ್ಲು ಕಟ್ಟಡ, ಇಟ್ಟಿಗೆಗಳು, ಮರ, ಮಣ್ಣು ಲೋಹ ಅಥವಾ ಯಾವುದೇ ಇತರ ಸಾಮಗ್ರಿಗಳದ್ದಾಗಿರಲಿ ಒಳಗೊಳ್ಳುತ್ತದೆ. ಆದರೆ ಕಟ್ಟಡದ ಅಡಕವಾಗಿರವ ಸ್ಥಿರಯಂತ ಅಥವಾ ಯಂತ್ರ ಸಾಮಗ್ರಿಗಳನ್ನು ಒಳಗೊಳ್ಳುವುದಿಲ್ಲ;

(ಗ) "ನ್ಯಾಯಾಲಯ" ಎಂದರೆ ಅಧಿಕಾರ ವ್ಯಾಪ್ತಿ ಹೊಂದಿರುವ ಜಿಲ್ಲಾ ನ್ಯಾಯಾಲಯ"

(ಘ) ಕಟ್ಟಡಕ್ಕೆ ಸಂಬಂಧಪಟ್ಟಂತೆ 'ರಚನೆ' ಎಂಬುದು ವಿಸ್ತರಣೆ, ಬದಲಾವಣೆ ಅಥವಾ ಪುನರ ರಚನೆಯನ್ನು ಒಳಗೊಳ್ಳುತ್ತದೆ;

(ಙ) 'ಸರ್ಕಾರ' ಎಂದರೆ ರಾಜ್ಯ ಸರ್ಕಾರ;

(ಙಙ) "ಗುಡಿಸಲು" ಎಂದರೆ ಮುಖ್ಯವಾಗಿ ಮರ, ಮಣ್ಣು, ಎಲೆಗಳು, ಹುಲ್ಲು ಅಥವಾ ಮಟ್ಟೆಯಿಂದ ನಿರ್ಮಿಸಿದಂಥ ಯಾವುದೇ ಕಟ್ಟಡ ಮತ್ತು ಅದು ಯಾವುದೇ ಗಾತ್ರದ ಯಾವುದೇ ತಾತ್ಕಾಲಿಕ ರಚನೆ ಅಥವಾ ಯಾವುದೇ ಸಾಮಗ್ರಿಯಿಂದ ಮಾಡಿದ ಯಾವುದೇ ಚಿಕ್ಕ ಕಟ್ಟಡವನ್ನು ಒಳಗೊಳ್ಳುತ್ತದೆ;

(ಚ) "ಭೂಮಿ"ಯು ಕಟ್ಟಡ ಮತ್ತು ಆ ಭೂಮಿಯಿಂದ ಉದ್ಭವಿಸುವ ಪ್ರಯೋಜನಗಳನ್ನು ಮತ್ತು ಭೂಮಿಗೆ ಲಗತ್ತಿಸಲಾದ ಅಥವಾ ಭೂಮಿಗೆ ಲಗತ್ತಿಸಿದ ಯಾವುದಕ್ಕಾದರೂ ಕಾಯಂ ಆಗಿ ಜೋಡಿಸಿದ ವಸ್ತುಗಳನ್ನು ಒಳಗೊಳ್ಳುತ್ತದೆ;

(ಚಚ) "ಲೇಸೆನ್ಸ್ ಪ್ರಾಧಿಕಾರ" ಎಂದರೆ ಯಾವುದೇ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಪಟ್ಟ ಕಾಮಗಾರಿಯ ನಿರ್ವಹಣೆಗಾಗಿ ಅನುಮತಿಯನ್ನು ಕೊಡಲು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸಕ್ಷಮವಾದ ಪ್ರಾಧಿಕಾರ;

(ಛ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಜ) "ಅಧಿಭೋಗದಾರ" ಎಂಬುದು–

(i) ತನ್ನ ಭೂಮಿಯನ್ನು ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಅಥವಾ ಅನ್ಯಥಾ ಉಪಯೋಗಿಸುತ್ತಿರುವ ಒಡೆಯ;

(ii) ಯಾವ ಭೂಮಿಯ ಅಥವಾ ಕಟ್ಟಡದ ಸಂಬಂಧದಲ್ಲಿ ಬಾಡಿಗೆಯನ್ನು ಸಂದಾಯ ಮಾಡಲಾಗುತ್ತಿದೆಯೋ ಅಥವಾ ಸಂದಾಯ ಮಾಡಬೇಕಾಗಿದೆಯೋ ಅಂಥ ಭೂಮಿ ಅಥವಾ ಅಂಥ ಕಟ್ಟಡದ ಬಾಡಿಗೆ ಅಥವಾ ಅದರ ಯಾವುದೇ ಭಾಗವನ್ನು ಒಡೆಯನಿಗೆ ತತ್ಕಾಲದಲ್ಲಿ ಸಂದಾಯ ಮಾಡುತ್ತಿರುವ ಅಥವಾ ಸಂದಾಯ ಮಾಡಲು ಹೊಣೆಯಾಗಿರುವ ಯಾವುದೇ ವ್ಯಕ್ತಿ;

(iii) ಯಾವುದೇ ಭೂಮಿಯ ಅಥವಾ ಕಟ್ಟಡದ ಬಾಡಿಗೆ ರಹಿತ ಬಾಡಿಗೆದಾರ;

(iv) ಯಾವುದೇ ಭೂಮಿ ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಲೆಸೆನ್ಸ್ ಪಡೆದವನು; ಮತ್ತು

(v) ಯಾವುದೇ ಭೂಮಿಯ ಅಥವಾ ಕಟ್ಟಡದ ಉಪಯೋಗ ಮತ್ತು ಅಧಿಭೋಗಕ್ಕಾಗಿ ಹಾನಿ ಪರಿಹಾರವನ್ನು ಒಡೆಯನಿಗೆ ಸಂದಾಯ ಮಾಡಲು ಹೊಣೆಗಾರನಾಗಿರುವ ಯಾವನೇ.– ವ್ಯಕ್ತಿ ಇವರನ್ನು ಒಳಗೊಳ್ಳುತ್ತದೆ;

(ಝ) "ಒಡೆಯ" ಎಂಬುದು ತನಗಾಗಿಯೇ ಆಗಲಿ ಅಥವಾ ತನ್ನ ಪರವಾಗಿ ಆಗಲಿ ಮತ್ತು ಇತರರ ಅಥವಾ ಏಜೆಂಟ್, ನ್ಯಾಸಧಾರಿ, ನಿರ್ವಾಹಕ, ಆಡಳಿತಗಾರ, ರಿಸೀವರ್ ಅಥವಾ ಪಾಲಕನಾಗಿ ಯಾವುದೇ ಭೂಮಿ ಅಥವಾ ಕಟ್ಟಡದ ಬಾಡಿಗೆಯನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸುವ ಹಕ್ಕುಳ್ಳ ಅಥವಾ ಭೂಮಿಯನ್ನು ಅಥವಾ ಕಟ್ಟಡವನ್ನು ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ, ಹಾಗೆ ಬಾಡಿಗೆಯನ್ನು ಸ್ವೀಕರಿಸುವ ಅಥವಾ ಬಾಡಿಗೆಯನ್ನು ಸ್ವೀಕರಿಸಲು ಹಕ್ಕುಳ್ಳ ಯಾವನೇ ವ್ಯಕ್ತಿಯನ್ನೂ ಒಳಗೊಳ್ಳುತ್ತದೆ;

(ಞ) ಯಾವುದೇ ಭೂಮಿ ಅಥವಾ ಕಟ್ಟಡಕ್ಕೆ ಸಂಬಂಧಪಟ್ಟಂತೆ "ಹಿತಾಸಕ್ತಿಯನ್ನುಳ್ಳ ವ್ಯಕ್ತಿ" ಎಂಬುದು ಈ ಅಧಿನಿಯಮದ ಮೇರೆಗೆ ಆ ಭೂಮಿ ಅಥವಾ ಕಟ್ಟಡದ ಅರ್ಜನೆಯ ಬಗ್ಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರದಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುವ ಅಥವಾ ಕ್ಲೇಮು ಮಾಡುವ ಹಕ್ಕುಳ್ಳ ಯಾವನೇ ವ್ಯಕ್ತಿಯನ್ನೊಳಗೊಳ್ಳುತ್ತದೆ;

(ಟ) "ನಿಯಮಿಸಲಾದದು" ಎಂದರೆ ಈ ಅಧಿನಿಯಮದ ಮೇರೆಗೆ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಠ) "ನಿಯಮಿಸಲಾದ ಪ್ರಾಧಿಕಾರ" ಎಂದರೆ ಅಧಿಸೂಚನೆಯ ಮೂಲಕ ಈ ಬಗ್ಗೆ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿ;

(ಡ) "ಕೊಳಚೆ ಪ್ರದೇಶ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೊಳಚೆ ಪ್ರದೇಶವೆಂದು ಘೋಷಿಸಿದ ಯಾವುದೇ ಪ್ರದೇಶ;

(ಢ) "ಕೊಳಚೆ ನಿರ್ಮೂಲನಾ ಪ್ರದೇಶ" ಎಂದರೆ 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೊಳಚೆ ನಿರ್ಮೂಲನ ಪ್ರದೇಶವೆಂದು ಘೋಷಿಸಿದ ಯಾವುದೇ ಕೊಳಚೆ ಪ್ರದೇಶ;

(ಣ) "ರಾಜ್ಯ ಗೃಹ ನಿರ್ಮಾಣ ಮಂಡಲಿ" ಎಂದರೆ, 1962ರ ಗೃಹನಿರ್ಮಾಣ ಮಂಡಲಿ ಅಧಿನಿಯಮದ (ಕರ್ನಾಟಕ ಅಧಿನಿಯಮ, 1963ರ 10) ಮೇರೆಗೆ ಸ್ಥಾಪಿತವಾದ ಕರ್ನಾಟಕ ಗೃಹ ನಿರ್ಮಾಣ ಮಂಡಲಿ;

(ತ) ಕೊಳಚೆ ಪ್ರದೇಶದಲ್ಲಿನ ಯಾವುದೇ ಕಟ್ಟಡಕ್ಕೆ ಸಂಬಂಧಪಟ್ಟಂತೆ, "ಮೇಲ್ಪಾಟು ಕೆಲಸ" ಎಂಬುದು ಈ ಕೆಳಕಂಡ ಯಾವುದೇ ಒಂದು ಅಥವಾ ಹೆಚ್ಚಿನ ಕಾಮಗಾರಿಗಳ ನಿರ್ವಹಣೆಯನ್ನು ಒಳಗೊಳ್ಳುತ್ತದೆ, ಎಂದರೆ–

(i) ಅವಶ್ಯಕ ದುರಸ್ತಿ;

(ii) ರಚನಾ ಪರಿವರ್ತನೆ;

(iii) ವಿದ್ಯುತ್ ದೀಪದ ಸ್ಥಳಗಳು, ನೀರಿನ ನಲ್ಲಿಗಳು ಮತ್ತು ಸ್ನಾನದ ಸ್ಥಳಗಳ ವ್ಯವಸ್ಥೆ;

(iv) ತೆರೆದ ಅಥವಾ ಮುಚ್ಚಿದ ಚರಂಡಿಗಳ ನಿರ್ಮಾಣ;

(v) ನೀರಿಲ್ಲದ ಕಕ್ಕಸ್ಸುಗಳನ್ನು ನೀರಿರುವ ಕಕ್ಕಸುಗಳನ್ನಾಗಿ ಪರಿವರ್ತಿಸುವುದನ್ನೊಳಗೊಂಡು ಕಕ್ಕಸುಗಳ ವ್ಯವಸ್ಥೆ;

(vi) ಹೆಚ್ಚುವರಿ ಅಥವಾ ಸುಧಾರಿತ ಜೋಡಣೆಗಳು ಅಥವಾ ಜೋಡಣೆ ಸಾಮಗ್ರಿಗಳ ವ್ಯವಸ್ಥೆ;

(vii) ಅಂಗಳವನ್ನು ತೆರೆಯುವುದು ಅಥವಾ ನೆಲಗಟ್ಟು ಮಾಡುವುದು;

(viii) ಕಸವನ್ನು ತೆಗೆದುಹಾಕುವುದು; ಮತ್ತು

(ix) ನಿಯಮಿಸಿದ ಪ್ರಾಧಿಕಾರದ ಅಭಿಪ್ರಾಯದಲ್ಲಿ ಮೇಲೆ ನಿರ್ದಿಷ್ಟಪಡಿಸಿದ ಯಾವುದೇ ಕಾಮಗಾರಿಯ ಕಾರ್ಯನಿರ್ವಹಣೆಗಾಗಿ ಅವಶ್ಯವೆನಿಸುವಂಥ ಯಾವುದೇ ಕಟ್ಟಡ ಅಥವಾ ಅದರ ಯಾವುದೇ ಭಾಗವನ್ನು ಕೆಡವಿ ಹಾಕುವುದನ್ನೊಳಗೊಂಡು ಯಾವುದೇ ಇತರ ಕಾಮಗಾರಿ.

## ಅಧ್ಯಾಯ– II

## ಕೊಳಚೆ ಪ್ರದೇಶಗಳ ಘೋಷಣೆ

**3. ಕೊಳಚೆ ಪ್ರದೇಶಗಳ ಘೋಷಣೆ.–**

(1) ಸರ್ಕಾರಕ್ಕೆ,–

(ಕ) ಪ್ರದೇಶವು ತಗ್ಗಿನಲ್ಲಿರುವುದು ಅನೈರ್ಮಲ್ಯಕರ, ಹೊಲಸು, ಮಿತಿ ಮೀರಿದ ಸಂದಣಿ ಇವುಗಳಿಂದಾಗಿ ಅಥವಾ ಅನ್ಯಥಾ ಆ ಪ್ರದೇಶ ಅಥವಾ ಅದರ ನೆರೆಹೊರೆಯ ಸಾರ್ವಜನಿಕ ಆರೋಗ್ಯ ಸುರಕ್ಷೆ ಅಥವಾ ಅನುಕೂಲಕ್ಕೆ ಯಾವುದೇ ಪ್ರದೇಶವು ಅಪಾಯದ ಮೂಲವಾಗಿದೆ ಅಥವಾ ಮೂಲವಾಗುವ ಸಂಭವವಿದೆಯೆಂದು; ಅಥವಾ

(ಖ) ಮನುಷ್ಯವಾಸಕ್ಕೆ ಉಪಯೋಗಿಸುವ ಅಥವಾ ಉಪಯೋಗಿಸಲು ಉದ್ದೇಶಿಸಿದ ಯಾವುದೇ ಪ್ರದೇಶದಲ್ಲಿ ಕಟ್ಟಡಗಳು–

(i) ಯಾವುದೇ ಬಗೆಯಲ್ಲಿ ಮನುಷ್ಯವಾಸಕ್ಕೆ ಯೋಗ್ಯವಾಗಿಲ್ಲವೆಂದು; ಅಥವಾ

(ii) ಅಂಥ ಕಟ್ಟಡಗಳು ಜೀರ್ಣಾವಸ್ಥೆ, ಜನನಿಬಿಡತೆ, ದೋಷಪೂರ್ಣ ವ್ಯವಸ್ಥೆ ಮತ್ತು ವಿನ್ಯಾಸ, ಬೀದಿಗಳು ಇಕ್ಕಟ್ಟಾಗಿರುವುದು ಮತ್ತು ಅವುಗಳ ದೋಷಪೂರ್ಣ ವ್ಯವಸ್ಥೆ, ವಾಯುಸಂಚಾರ, ದೀಪ ಅಥವಾ ನೈರ್ಮಲ್ಯ ಸೌಲಭ್ಯಗಳ ಅಭಾವ ಅಥವಾ ಈ ಸಂಬಂಧದಲ್ಲಿ ಯಾವುದೇ ಕೂಟದಿಂದಾಗಿ ಸುರಕ್ಷೆ, ಆರೋಗ್ಯ ಮತ್ತು ನೀತಿಗೆ ಹಾನಿಕರವೆಂದು ಮನದಟ್ಟಾದಲ್ಲಿ

– ಅದು ಅಧಿಸೂಚನೆಯ ಮೂಲಕ ಅಂಥ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಬಹುದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ ಕಟ್ಟಡವು ಮನುಷ್ಯವಾಸಕ್ಕೆ ಆಯೋಗ್ಯವೇ ಹೇಗೆ ಎಂಬುದನ್ನು ನಿರ್ಧರಿಸುವಲ್ಲಿ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಅದರ ಪರಿಸ್ಥಿತಿಯ ಬಗ್ಗೆ ಗಮನವಿಡತಕ್ಕದ್ದು, ಎಂದರೆ;

(i) ದುರಸ್ತಿ

(ii) ಸ್ಥಿರತೆ

(iii) ತೇವವಿಲ್ಲದಿರುವುದು

(iv) ಸ್ವಾಭಾವಿಕ ಬೆಳಕು ಮತ್ತು ಗಾಳಿ

(v) ನೀರು ಸರಬರಾಜು

(vi) ಚರಂಡಿ ವ್ಯವಸ್ಥೆ ಮತ್ತು ನೈರ್ಮಲ್ಯ ಸೌಕರ್ಯಗಳು

(vii) ಆಹಾರದ ದಾಸ್ತಾನು, ತಯಾರಿಕೆ ಮತ್ತು ಪಾಕಗೊಳಿಸುವುದಕ್ಕಾಗಿ ಬೇಯಿಸುವ ಮತ್ತು ನಿರುಪಯುಕ್ತ ನೀರನ್ನು ವಿಲೆ ಮಾಡುವುದಕ್ಕಾಗಿನ ಸೌಲಭ್ಯಗಳು ಮತ್ತು ಆ ಕಟ್ಟಡವು ಅಧಿಭೋಗಕ್ಕೆ ಅದು ಉಪಯುಕ್ತವಾಗಿಲ್ಲದ ಹಾಗೆ ಸದರಿ ಒಂದು ಅಥವಾ ಹೆಚ್ಚಿನ ವಿಷಯಗಳಲ್ಲಿ ದೋಷಪೂರ್ಣವಾಗಿದ್ದರೆ ಅದನ್ನು ಮೇಲೆ ಹೇಳಿದಂತೆ ಆರೋಗ್ಯವೆನಿಸುವುದಾಗಿ ಭಾವಿಸತಕ್ಕದ್ದು.

## ಅಧ್ಯಾಯ– III

## ಕೊಳಚೆ ಪ್ರದೇಶಗಳ ಬೆಳವಣಿಗೆಯನ್ನು ತಡೆಗಟ್ಟುವುದು

**4. ಕೊಳಚೆ ಪ್ರದೇಶಗಳಲ್ಲಿ ಕಟ್ಟಡಗಳ ನೋಂದಣಿ–**

(1) (ಕ) ಯಾವುದೇ ಕೊಳಚೆ ಪ್ರದೇಶದಲ್ಲಿ ಇರುವ ಪ್ರತಿಯೊಂದು ಕಟ್ಟಡದ ಒಡೆಯ ಅಥವಾ ಅಧಿಭೋಗದಾರರು (ಖ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ನಿಯಮಿಸಲಾದಂಥ ನಮೂನೆಯಲ್ಲಿ ವಿವರಣ ಪತ್ರವನ್ನು ಕಳುಹಿಸಿತಕ್ಕದ್ದು;

(ಖ) (ಕ) ಖಂಡದ ಮೇರೆಗಿನ ವಿವರಣ ಪತ್ರವನ್ನು ನಿಯಮಿಸಬಹುದಾದಂಥ ಅವಧಿಯೊಳಗೆ ಕಳುಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ವಿವರಣ ಪತ್ರವನ್ನು ಸ್ವೀಕರಿಸಿದ ಮೇಲೆ ನಿಯಮಿಸಿದ ಪ್ರಾಧಿಕಾರವು ಆ ವಿವರಣ ಪತ್ರದ ಸರಿತನದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಆ ಉದ್ದೇಶಕ್ಕಾಗಿ ಇಟ್ಟಿರುವ ಮತ್ತು ನಿಯಮಿಸಬಹುದಾದಂಥ ವಿವರಗಳನ್ನು, ಒಳಗೊಂಡಿರುವ ರಿಜಿಸ್ಟರಿನಲ್ಲಿ ನೋಂದಾಯಿಸತಕ್ಕದ್ದು ಮತ್ತು ಆ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನಿಗೆ ನಿಯಮಿಸಿದ ನಮೂನೆಯಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ಕೊಡತಕ್ಕದ್ದು.

**5. ಕೊಳಚೆ ಪ್ರದೇಶಗಳಲ್ಲಿ ಕಟ್ಟಡ ಮುಂತಾದವುಗಳ ಮೇಲೆ ಪರಿಬಂಧ.–**

(1) ನಿಯಮಿಸಿದ ಪ್ರಾಧಿಕಾರವು ಅಧಿಸೂಚನೆಯ ಮೂಲಕ ಅಂಥ ಪ್ರಾಧಿಕಾರದ ಬರಹದಲ್ಲಿನ ಪೂರ್ವಾನುಮತಿಯನ್ನು ಪಡೆದ ಹೊರತು ಕೊಳಚೆ ಪ್ರದೇಶದಲ್ಲಿ ಯಾವನೇ ವ್ಯಕ್ತಿಯು ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದಲ್ಲವೆಂದು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯು ಅಂಥ ಕೊನೆಗೊಳ್ಳುವಿಕೆ ಮುಂಚೆ ಮಾಡಿದ ಅಥವಾ ಮಾಡಲು ತಪ್ಪಿದ ವಿಷಯಗಳಿಗೆ ಸಂಬಂಧಿಸಿದಂತೆ ಹೊರತು, ಅದರ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ಮೇಲೆ ಪರಿಣಾಮಕಾರಿಯಾಗಿರುವುದು ನಿಂತು ಹೋಗತಕ್ಕದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅನುಮತಿಯನ್ನು ಪಡೆಯಲು ಇಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಿದ ಪ್ರಾಧಿಕಾರಕ್ಕೆ ಯಾವ ಕಟ್ಟಡಕ್ಕೆ ಅರ್ಜಿಯು ಸಂಬಂಧಪಟ್ಟಿದೆಯೋ ಆ ಕಟ್ಟಡದ ನಿರ್ಮಾಣಕ್ಕೆ ಸಂಬಮಧಿಸಿದಂತೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಮಾಹಿತಿಯನ್ನು ಒಳಗೊಂಡ ಬರಹದಲ್ಲಿನ ಅರ್ಜಿಯನ್ನು ಸಲ್ಲಿಸತಕ್ಕುದು.

(4) ಅಂತಹ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನಿಯಮಿಸಿದ ಪ್ರಾಧಿಕಾರವು, ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾಂಥ ವಿಚಾರಣೆಯನ್ನು ಮಾಡಿದ ಮೇಲೆ ಬರಹದಲ್ಲಿನ ಆದೇಶದ ಮೂಲಕ;

(ಕ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ನಿಬಂಧನೆಗಳು ಮತ್ತು ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಅನುಮತಿಯನ್ನು ಕೊಡಬಹುದು; ಅಥವಾ

(ಖ) ಅಂಥ ಅನುಮತಿಯನ್ನು ಕೊಡಲು ನಿರಾಕರಿಸಬಹುದು:

ಪರಂತು, ಅಂಥ ಅನುಮತಿಯನ್ನು ನಿರಾಕರಿಸುವ ಆದೇಶವನ್ನು ಮಾಡುವದಕ್ಕೆ ಮುಂಚೆ ಆ ಅನುಮತಿಯನ್ನು ಏಕೆ ನಿರಾಕರಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಅರ್ಜಿದಾರನಿಗೆ ಕೊಡತಕ್ಕದ್ದು.

(5) (1)ನೇ ಉಪಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ,–

(ಕ) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ನೋಟೀಸಿನ ಮೂಲಕ ಅಥವಾ 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕೊಟ್ಟಿರುವ ವಚನಬಂಧದ ಅನುಸರಣೆಯಲ್ಲಿ ನಿರ್ವಹಿಸಬೇಕಾದ ಅಗತ್ಯತೆ ಇರುವು ಯಾವುದೇ ಮೇಲ್ಪಾಟಿನ ಕಾಮಗಾರಿಗಳು, ಅಥವಾ

(ಖ) 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದಂಥ ಅಧಿಸೂಚನೆಗೆ ಸಂಬಂಧಿಸಿದಂತೆ ಯಾವುದೇ ಪ್ರದೇಶದಲ್ಲಿ ಯಾವುದೇ ಕಟ್ಟಡದ ನಿರ್ಮಾಣಕ್ಕೆ–

– ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ–IIIಕ

## ಅನಧಿಕೃತ ನಿರ್ಮಾಣಗಳ ನಿಷೇಧ

**5ಕ. ಅನ್ವಯ:–** (1) ಈ ಅಧ್ಯಾಯವು

(i) 1976ರ ಕರ್ನಾಟಕ ಪೌರ ನಿಗಮಗಳ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ರಚಿಸಿದ ಅಥವಾ ಮುಂದುವರಿಸಿದ ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಮಂಗಳೂರು ಮತ್ತು ಮೈಸೂರು ನಗರಗಳಲ್ಲಿ ಮತ್ತು ಸದರಿ ನಗರಗಳ ಪರಿಮಿತಿಗಳಿಂದ ಐದು ಕಿಲೋಮೀಟರ್ ಒಳಗಿನ ಪ್ರದೇಶಗಳಲ್ಲಿ ಈ ಕೂಡಲೇ ಜಾರಿಗೆ ಬರತಕ್ಕದ್ದು.

(ii) 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ರಚಿಸಿದ ಅಥವಾ ಮುಂದುವರಿಸಿದ ಪೌರಸಭೆಗಳಲ್ಲಿ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಿಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಪೌರಸಭೆಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸುವುದು.

**ವಿವರಣೆ.–** (1) ಈ ಖಂಡದ ಉದ್ದೇಶಗಳಿಗಾಗಿ "ಪೌರಸಭೆಗಳು" ಅಧಿಸೂಚಿತ ಪ್ರದೇಶ ಸಮಿತಿಗಳು ನೈರ್ಮಲ್ಯ ಮಂಡಲಿಗಳು ಮತ್ತು ನಗರ ಮಂಡಲಿಗಳನ್ನು ಒಳಗೊಳ್ಳುತ್ತವೆ.

(2) ಈ ಅಧ್ಯಾಯವು ರಾಜ್ಯದಲ್ಲಿನ ಇತರ ಪ್ರದೇಶಗಳಿಗೆ ಅನ್ವಯವಾಗತಕ್ಕದ್ದಲ್ಲ.

**5ಖ. ಪೂರ್ವಾನುಮತಿ ಇಲ್ಲದೆ, ಕಟ್ಟಡಗಳ ನಿರ್ಮಾಣ ನಿಷೇಧ:–**

(1) (ಕ) ಯಾವುದೇ ಪ್ರದೇಶದಲ್ಲಿ ಈ ಅಧ್ಯಾಯವು ಜಾರಿಗೆ ಬಂದ ತರವಾಯ ಅಂಥ ಪ್ರದೇಶದಲ್ಲಿ ಕಟ್ಟಡದ ಯಾವುದೇ ನಿರ್ಮಾಣ ಅಥವಾ ಪುನರ್ ನಿರ್ಮಾಣವನ್ನು, ಅಂಥ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಪಟ್ಟ ಕೆಲಸ ನಿರ್ವಹಣೆಗಾಗಿ ಲೆಸೆನ್ಸ್ ಕೊಡುವ ಪ್ರಾಧಿಕಾರವು ಸಂಬಂಧಪಟ್ಟ ಕಾನೂನಿನ ಮೇರೆಗೆ ಅಂಥ ವ್ಯಕ್ತಿಗೆ ಅನುಮತಿಯನ್ನು ಕೊಟ್ಟ ಹೊರತು ಯಾವನೇ ವ್ಯಕ್ತಿಯು ಅದನ್ನು ಪ್ರಾರಂಭಿಸತಕ್ಕದ್ದಲ್ಲ.

(ಖ) ಯಾವನೇ ವ್ಯಕ್ತಿಯು (ಕ) ಖಂಡವನ್ನು ಉಲ್ಲಂಘಿಸಿ ನಿರ್ಮಿಸಿದ ಅಥವಾ ಪುನರ ನಿರ್ಮಿಸಿದ ಯಾವುದೇ ಕಟ್ಟಡದ ಅಧಿಭೋಗದಾರನಿಂದ ಯಾವುದೇ ಹೆಸರಿನಿಂದ ಕರೆಯಲಾದ ಯಾವುದೇ ಬಾಡಿಗೆಯನ್ನು ಅಥವಾ ಇತರ ವೆಚ್ಚಗಳನ್ನು ವಸೂಲು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅಂಥ ಉಲ್ಲಂಘನೆಯನ್ನು ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು.

ಪರಂತು,

(i) ಮೊದಲನೇ ಅಪರಾಧದ ಸಂದರ್ಭದಲ್ಲಿ ಕಾರಾಗೃಹ ವಾಸದ ಅವಧಿಯು ಆರು ತಿಂಗಳುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ; ಮತ್ತು

(ii) ಎರಡನೇ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ ಕಾರಾಗೃಹವಾಸದ ಅವಧಿಯು ಒಂದು ವರ್ಷಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಜುಲ್ಮಾನೆಯ ಮೊಬಲಗು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

**5ಗ. ಕಾನೂನುಬಾಹಿರವಾಗಿ ಪ್ರಾರಂಭಿಸಿದ, ಕಟ್ಟುತ್ತಿರುವ ಅಥವಾ ಪೂರ್ಣಗೊಳಿಸಿದ ಕಟ್ಟಡಗಳನ್ನು ಕೆಡವಿ ಹಾಕುವುದು:–**

(1) ಮಂಡಲಿಗೆ, ಯಾವುದೇ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣವು ಸಂಬಂಧಪಟ್ಟ ಕಾನೂನಿನ ಮೇರೆಗೆ ಲೈಸೆನ್ಸನ್ನು ಕೊಡುವ ಪ್ರಾಧಿಕಾರದ ಅನುಮತಿಯನ್ನು ಪಡೆಯದೇ ಪ್ರಾರಂಭಿಸಲಾಗಿದೆ ಅಥವಾ ಕಟ್ಟುತ್ತಿರಲಾಗಿದೆ ಅಥವಾ ಪೂರ್ಣಗೊಳಿಸಲಾಗಿದೆ ಎಂದು ಮನದಟ್ಟಾದರೆ, ಮಂಡಲಿಯು ಆ ಕಟ್ಟಡದ ಒಡೆಯ ಅಥವಾ ಅದನ್ನು ಕಟ್ಟುವವನು ಅಥವಾ ಅದರ ಅಧಿಭೋಗದಾರರನ್ನು, ಮಾಡಿದ ಕೆಲಸವನ್ನು ಕೆಡವಿ ಹಾಕಲು ಅಗತ್ಯಪಡಿಸುವ ತಾತ್ಕಾಲಿಕ ಆದೇಶವನ್ನು ಮಾಡಬಹುದು ಮತ್ತು ಒಡೆಯ ಅಥವಾ ಕಟ್ಟುವವನನ್ನು ಆ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣ ಕಾರ್ಯವನ್ನು ಮುಂದುವರೆಸದಂತೆಯೂ ಸಹ ನಿರ್ದೇಶಿಸಬಹುದು.

(2) ಮಂಡಲಿಯು ಆ ಕಟ್ಟಡದ ಒಡೆಯ ಅಥವಾ ಅದನ್ನು ಕಟ್ಟುವವನು ಅಥವಾ ಅದರ ಅಧಿಭೋಗದಾರನಿಗೆ (1)ನೇ ಉಪಪ್ರಕರಣದ ಮೇರೆಗೆ, ಮಾಡಿದ ತಾತ್ಕಾಲಿಕ ಆದೇಶದ ಪ್ರತಿಯನ್ನು ಆ ಆದೇಶವನ್ನು ಯಾಕೆ ಸ್ಥಿರೀಕರಿಸಬಾರದು ಎಂಬುದಕ್ಕೆ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಯುಕ್ತ ಕಾಲದೊಳಗೆ ಅವನನ್ನು ಕಾರಣ ತೋರಿಸಲು ಅಗತ್ಯಪಡಿಸುವ ನೋಟೀಸನ್ನೊಂದು ಜಾರಿ ಮಾಡತಕ್ಕದ್ದು.

(3) ಒಡೆಯ ಅಥವಾ ಕಟ್ಟುವವನು ಅಥವಾ ಅಧಿಭೋಗದಾರನು ಮಂಡಲಿಗೆ ಮನದಟ್ಟಾಗುವಂತೆ ಕಾರಣವನ್ನು ತೋರಿಸಲು ವಿಫಲನಾದರೆ ಅದು ಸೂಕ್ತವೆಂದು ಯೋಚಿಸಬಹುದಾದಂಥ ಮಾರ್ಪಾಟುಗಳೊಂದಿಗೆ ಆದೇಶವನ್ನು ಸ್ವೀಕರಿಸಬಹುದು, ಮತ್ತು ಅಂಥ ಆದೇಶಕ್ಕೆ ಒಡೆಯ, ಕಟ್ಟುವವನು ಮತ್ತು ಅಧಿಭೋಗದಾರನು ಬದ್ಧನಾಗಿರತಕ್ಕದ್ದು ಮತ್ತು ಆ ಆದೇಶವನ್ನು ಮುಕ್ತವಾಗಿ ಜಾರಿಗೊಳಿಸುವುದಕ್ಕೆ ತನ್ನ ಅಭಿಪ್ರಾಯದಲ್ಲಿ ಅವಶ್ಯವಾಗಬಹುದಾದಂಥ ಯಾವುದೇ ಕ್ರಮವನ್ನು ಮಂಡಲಿಯು ಕೈಗೊಳ್ಳಬಹುದು ಅಥವಾ ಯಾವುದೇ ಕಾರ್ಯವನ್ನು ಮಾಡಬಹುದು ಮತ್ತು ಆ ಉದ್ದೇಶಕ್ಕಾಗಿ ವಹಿಸಿದ ವೆಚ್ಚಗಳನ್ನು ಭೂ ಕಂದಾಯದ ಬಾಕಿ ಎಂಬಂತೆ ಒಡೆಯ, ಕಟ್ಟುವವನು ಮತ್ತು ಅಧಿಭೋಗದಾರನಿಂದ ವಸೂಲೀಯವಾಗತಕ್ಕದ್ದು. ಮಂಡಲಿಯು ಆ ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಉಪಯೋಗಿಸಿದ ಸಾಮಗ್ರಿಗಳು ಮತ್ತು ಉಪಕರಣಗಳನ್ನು ಅಭಿಗ್ರಹಿಸಬಹುದು ಮತ್ತು ಅವುಗಳನ್ನು ಮಾರಾಟ ಮಾಡಬಹುದು ಮತ್ತು ಮಾರಾಟದ ಉತ್ಪತ್ತಿಗಳನ್ನು ವಹಿಸಿದ ವೆಚ್ಚಗಳ ಬಗ್ಗೆ ವಿನಿಯೋಗಿಸಬಹುದು.

(4) 5ಖ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣದ ಕೆಲಸವನ್ನು ಪ್ರಾರಂಭಿಸಿದರೆ ಮತ್ತು ಕೂಡಲೇ ಕ್ರಮವನ್ನು ಕೈಗೊಳ್ಳತಕ್ಕದ್ದೆಂದು ಮಂಡಲಿಯು ಅಭಿಪ್ರಾಯಪಟ್ಟರೆ ಆಗ ಈ ಅಧ್ಯಾಯದಲ್ಲಿ ಏನೇ ಅಡಕವಾಗಿದ್ದಾಗ್ಯೂ (2)ನೇ ಉಪಪ್ರಕರಣದ ಮೇರೆಗೆ, ಕೊಡಬೇಕಾಗಿರುವ ನೋಟೀಸು ಇಪ್ಪತ್ತನಾಲ್ಕು ಗಂಟೆಗಳ ಅವಧಿಗಿಂತ ಕಡಿಮೆ ಅವಧಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಆ ನೋಟೀಸು ಸಂಬಂಧಪಡುವಂಥ ಕಟ್ಟಡದ ಯಾವುದೇ ಎದ್ದು ಕಾಣುವ ಭಾಗದಲ್ಲಿ ಅದನ್ನು ಅಂಟಿಸಿದರೆ ಮತ್ತು ಅಂಥ ಕಟ್ಟಡದಲ್ಲಿ ಅಥವಾ ಅದರ ಬಳಿ ಮತ್ತು ಡಂಗುರವನ್ನು ಸಾರುವುದರೊಂದಿಗೆ ಉದ್ಘೋಷಣೆಯ ಮೂಲಕ ಪ್ರಕಟಿಸಿದರೆ ಅದನ್ನು ಕ್ರಮಬದ್ಧವಾಗಿ ಜಾರಿಗೊಳಿಸಿದುದಾಗಿ ಭಾವಿಸತಕ್ಕದ್ದು ಮತ್ತು ಅಂಥ ಅಂಟಿಸುವಿಕೆ ಮತ್ತು ಪ್ರಕಟಣೆಯ ತರುವಾಯ ಸಂಬಂಧಿಸಿದ ಎಲ್ಲ ವ್ಯಕ್ತಿಗಳಿಗೆ ಅದರಲ್ಲಿ ನಮೂದಿಸಿದ ವಿಷಯಗಳನ್ನು ಕ್ರಮಬದ್ಧವಾಗಿ ತಿಳಿಸಿರುವುದಾಗಿ ಭಾವಿಸತಕ್ಕದ್ದು.

(5) ಸರ್ಕಾರವು, ಈ ಪ್ರಕರಣದ ಮೇರೆಗೆ ಮಂಡಲಿಯ ಯಾವುದೇ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ಮಂಡಲಿಯ ಆದೇಶವು ಕಾನೂನಿಗೆ ತದ್ವಿರುದ್ಧವಾಗಿದೆ ಎಂದು ಸರ್ಕಾರಕ್ಕೆ ಮನದಟ್ಟಾದರೆ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಯಾವುದೇ ಆದೇಶವನ್ನು ಯಾವುದೇ ಪಕ್ಷಕಾರನಿಗೆ ಬಾಧಕವಾಗುವಂತೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರತು ಮಾಡತಕ್ಕದ್ದಲ್ಲ.

5ಫ 1976 ಕರ್ನಾಟಕ ಪೌರ ನಿಗಮ ಅಧಿನಿಯಮದ ಮತ್ತು ಇತರ ಕಾನೂನುಗಳು ಬಾಧಕವಾಗತಕ್ಕದ್ದಲ್ಲ–

ಈ ಅಧ್ಯಾಯದಲ್ಲಿ ಇರುವುದು ಯಾವುದು, 1976ರ ಕರ್ನಾಟಕ ಪೌರ ನಿಗಮಗಳ ಅಧಿನಿಯಮ ಅಥವಾ 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮ ಅಥವಾ ಯಾವುದೇ ಇತರ ಕಾನೂನು ಅಥವಾ ಅವುಗಳ ಮೇರೆಗೆ ರಚಿಸಲಾದ ನಿಯಮಗಳ ಪ್ರವರ್ತನೆಯನ್ನು ಬಾಧಿಸುವುದೆಂದು ಭಾವಿಸತಕ್ಕದ್ದಲ್ಲ ಮತ್ತು ಈ ಅಧ್ಯಾಯದ ಉಪಬಂಧಗಳು ಸದರಿ ಅಧಿನಿಯಮಗಳು, ಕಾನೂನುಗಳು ಮತ್ತು ನಿಯಮಗಳ ಉಪಬಂಧಗಳ ಜೊತೆಗೆ ಇರತಕ್ಕದ್ದು ಮತ್ತು ಅವುಗಳನ್ನು ಅಲ್ಪೀಕರಿಸತಕ್ಕದ್ದಲ್ಲ.

## ಅಧ್ಯಾಯ–IV

## ಕೊಳಚೆ ಪ್ರದೇಶಗಳ ಮೇಲ್ಪಾಟು

**6. ಕೊಳಚೆ ಪ್ರದೇಶಗಳಲ್ಲಿ ಮೇಲ್ಪಾಟಿನ ಕಾಮಗಾರಿಗಳ ನಿರ್ವಹಣೆಯನ್ನು ಅಗತ್ಯಪಡಿಸಲು ನಿಯಮಿಸಿದ ಪ್ರಾಧಿಕಾರದ ಅಧಿಕಾರ:–** (1) ನಿಯಮಿಸಿದ ಪ್ರಾಧಿಕಾರಕ್ಕೆ ಯುಕ್ತ ವೆಚ್ಚದಲ್ಲಿ:–

(ಕ) ಯಾವುದೇ ಕೊಳಚೆ ಪ್ರದೇಶ ಅಥವಾ ಅದರಲ್ಲಿ ಯಾವುದೇ ಭಾಗವನ್ನು ಆ ಪ್ರದೇಶದ ಸಾರ್ವಜನಿಕ ಆರೋಗ್ಯ, ಸುರಕ್ಷೆ ಅಥವಾ ಅನುಕೂಲತೆಗಳಿಗೆ ಅಪಾಯದ ಮೂಲವಾಗದ ಹಾಗೆ ಮೇಲ್ಪಾಟುಗೊಳಿಸಲು ಸಾಧ್ಯವಾಗುತ್ತದೆ; ಅಥವಾ

(ಖ) ಕೊಳಚೆ ಪ್ರದೇಶದಲ್ಲಿ ಮನುಷ್ಯ ವಾಸಕ್ಕಾಗಿ ಆಯೋಗ್ಯವಾಗಿರುವ ಯಾವುದೇ ಕಟ್ಟಡವನ್ನು ಮನುಷ್ಯ ವಾಸಕ್ಕಾಗಿ ಯೋಗ್ಯಗೊಳಿಸಬಹುದು ಎಂದು ಮನದಟ್ಟಾಗಿರುವಲ್ಲಿ, ಸಂದರ್ಭಾನುಸಾರ ಕೊಳಚೆ ಪ್ರದೇಶ ಅಥವಾ ಅದರ ಭಾಗದ ಅಥವಾ ಕಟ್ಟಡದ ಒಡೆಯನಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅರವತ್ತು ದಿವಸಗಳಿಗೆ ಕಡಿಮೆ ಇಲ್ಲದ ಕಾಲದಲ್ಲಿ ಅದರಲ್ಲಿ ನಿರ್ದಿಷ್ಟಪಡಿಸಿದ ಮೇಲ್ಪಾಟಿನ ಕಾಮಗಾರಿಗಳನ್ನು ನಿರ್ವಹಿಸಲು ಅಗತ್ಯಪಡಿಸುವ ನೋಟೀಸನ್ನು ಜಾರಿ ಮಾಡಬಹುದು:

ಪರಂತು, ಕಟ್ಟಡದ ಒಡೆಯನು ಕಟ್ಟಡವು ಇರುವಂಥ ಭೂಮಿಯ ಒಡೆಯನಿಂದ ಬೇರೆಯಾಗಿರುವಲ್ಲಿ ಮತ್ತು ನಿರ್ವಹಿಸಬೇಕೆಂದು ಅಗತ್ಯಪಡಿಸಿದ ಮೇಲ್ಪಾಟಿನ ಕಾಮಗಾರಿಗಳು ಸಂದರ್ಭಾನುಸಾರ ನೀರಿನ ನಲ್ಲಿಗಳು, ಸ್ನಾನದ ಸ್ಥಳಗಳನ್ನು ಒದಗಿಸುವುದಕ್ಕೆ ತೆರೆದ ಅಥವಾ ಮುಚ್ಚಿದ ಚರಂಡಿಗಳ ನಿರ್ಮಾಣಕ್ಕೆ, ನೀರನ್ನು ಹೊಂದಿರುವ ಕಕ್ಕಸುಗಳನ್ನು ಒದಗಿಸುವುದಕ್ಕೆ ಕಸವನ್ನು ತೆಗೆದುಹಾಕುವುದಕ್ಕೆ ಸಂಬಂಧಪಟ್ಟರೆ ಮತ್ತು ಅಂಥ ಕಾಮಗಾರಿಗಳನ್ನು ಕಟ್ಟಡದ ಹೊರಗಡೆ ನಿರ್ವಹಿಸಬೇಕಾದರೆ ಆ ನೋಟೀಸನ್ನು ಭೂಮಿಯ ಒಡೆಯನಿಗೆ ಜಾರಿ ಮಾಡತಕ್ಕದ್ದು.

(2) ಸಂಬಂಧಪಟ್ಟ ಒಡೆಯನಿಗೆ (1)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಜಾರಿಗೊಳಿಸುವುದರ ಜೊತೆಗೆ ನಿಯಮಿಸಿದ ಪ್ರಾಧಿಕಾರವು, ಕೊಳಚೆ ಪ್ರದೇಶ ಅಥವಾ ಅದರ ಭಾಗ ಅಥವಾ ಕಟ್ಟಡ ಅಥವಾ ಕಟ್ಟಡವು ಇರುವಂಥ ಭೂಮಿಯಲ್ಲಿ ಬಾಡಿಗೆದಾರನಾಗಿಯೇ ಆಗಲಿ ಅಡಮಾನ ಪಡೆದವನಾಗಿಯೇ ಆಗಲಿ ಅಥವಾ ಅನ್ಯಥಾ ಆಗಲಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಇತರ ವ್ಯಕ್ತಿಗೆ ನೋಟೀಸಿನ ಪ್ರತಿಯನ್ನು ಜಾರಿ ಮಾಡಬಹುದು.

(3) ಈ ಅಧಿನಿಯಮದ ಉದ್ದೇಶಗಳಿಗಾಗಿ ಕೊಳಚೆ ಪ್ರದೇಶ ಅಥವಾ ಅದರ ಭಾಗವನ್ನು ಯುಕ್ತ ವೆಚ್ಚದಲ್ಲಿ ಮೇಲ್ಪಾಟುಗೊಳಿಸಬಹುದೋ ಹೇಗೆ ಅಥವಾ ಕಟ್ಟಡವು ಮನುಷ್ಯ ವಾಸಕ್ಕೆ ಯೋಗ್ಯವಾಗುವಂತೆ ಮಾಡಬಹುದೋ ಹೇಗೆ ಎಂಬುದನ್ನು ನಿರ್ಧರಿಸುವಲ್ಲಿ, ಕೊಳಚೆ ಪ್ರದೇಶ ಅಥವಾ ಅದರ ಭಾಗದ ಮೇಲ್ಪಾಟಿನ ಕಾಮಗಾರಿಗಳು ಅಥವಾ ಕಟ್ಟಡವನ್ನು ಮನುಷ್ಯವಾಸಕ್ಕೆ ಯೋಗ್ಯವನ್ನಾಗಿಸಲು ಅವಶ್ಯವಾದ ಕಾಮಗಾರಿಗಳ ಅಂದಾಜು ಖರ್ಚನ್ನು ಮತ್ತು ಅಂಥ ಕಾಮಗಾರಿಗಳನ್ನು ಪೂರ್ಣಗೊಳಿಸಿದಾಗ, ಕೊಳಚೆ ಪ್ರದೇಶ ಅಥವಾ ಅದರ ಭಾಗ ಅಥವಾ ಕಟ್ಟಡದ ಅಂದಾಜು ಮೌಲ್ಯವನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

7. **ಕೊಳಚೆ ಪ್ರದೇಶದ ಮೇಲ್ಪಾಟಿನ ಕಾಮಗಾರಿಗಳನ್ನು ನಿರ್ವಹಿಸಲು ಮತ್ತು ವೆಚ್ಚಗಳನ್ನು ವಸೂಲು ಮಾಡಲು ಅಧಿಕಾರ:–** (1) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ನೋಟೀಸನ್ನು ಪಾಲಿಸದೇ ಇದ್ದರೆ, ಆಗ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲವು ಮುಕ್ತಾಯವಾದ ತರುವಾಯ ನಿಯಮಿಸಿದ ಪ್ರಾಧಿಕಾರವು, ನೋಟೀಸಿನ ಮೂಲಕ ನಿರ್ವಹಿಸಬೇಕೆಂದು ಅಗತ್ಯಪಡಿಸಿದ ಕಾಮಗಾರಿಗಳನ್ನು ತಾನೇ ನಿರ್ವಹಿಸಬಹುದು.

(2) ಈ ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು ವಹಿಸಿದ ಎಲ್ಲ ವೆಚ್ಚಗಳಿಗಾಗಿ ತಗಾದೆ ಮಾಡಿದ ದಿನಾಂಕದಿಂದ ಸಂದಾಯ ಮಾಡುವವರೆಗೆ, ಸರ್ಕಾರವು ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯೊಂದಿಗೆ ನಿಯಮಿಸಿದ ಪ್ರಾಧಿಕಾರವು ಭೂಕಂದಾಯದ ಬಾಕಿಯಂತೆ ಸಂದರ್ಭಾನುಸಾರ ಕೊಳಚೆ ಪ್ರದೇಶ ಅಥವಾ ಅದರ ಭಾಗ ಅಥವಾ ಕಟ್ಟಡ ಅಥವಾ ಕಟ್ಟಡವು ಇರುವಂಥ ಭೂಮಿಯ ಒಡೆಯನಿಂದ ವಸೂಲಿ ಮಾಡಬಹುದು ಮತ್ತು ಎಲ್ಲ ಅಂಥ ವೆಚ್ಚಗಳು ಮತ್ತು ಬಡ್ಡಿಯು ಸಂದರ್ಭಾನುಸಾರ ಕೊಳಚೆ ಪ್ರದೇಶ ಅಥವಾ ಅದರ ಭಾಗ ಅಥವಾ ಕಟ್ಟಡ ಅಥವಾ ಕಟ್ಟಡವು ಇರುವಂಥ ಭೂಮಿಯ ಮೇಲೆ ಋಣಭಾರವಾಗಿರತಕ್ಕದ್ದು;

ಪರಂತು, ಒಡೆಯನು,

(ಕ) ಬೇರೆ ಇತರ ವ್ಯಕ್ತಿಗಾಗಿ ಏಜೆಂಟ್ ಅಥವಾ ನ್ಯಾಸಧಾರಿಯಾಗಿ ಮಾತ್ರ ಬಾಡಿಗೆಯನ್ನು ತಾನು ಸ್ವೀಕರಿಸುತ್ತಿದ್ದೇನೆಂದು; ಮತ್ತು

(ಖ) ಆ ಇತರ ವ್ಯಕ್ತಿಯ ಪರವಾಗಿ ತನ್ನ ಬಳಿ ನಿಯಮಿಸಿದ ಪ್ರಾಧಿಕಾರ ಇಡೀ ತಗಾದೆಯನ್ನು ಪೂರೈಸಲು ಸಾಕಷ್ಟು ಹಣವು ಇಲ್ಲವೆಂದು ರುಜುವಾತುಪಡಿಸಿದರೆ, ಹಿಂದೆ ಹೇಳಿದಂತೆ ತನ್ನ ಬಳಿ ಅವನು ಹೊಂದಿರುವಂಥ ಹಣದ ಒಟ್ಟು ಮೊಬಲಗಿಗೆ ಅವನ ಹೊಣೆಗಾರಿಕೆಯ ಸೀಮಿತವಾಗಿರತಕ್ಕದ್ದು.

8. **ಮೇಲ್ಪಾಟು ಕಾಮಗಾರಿಗಳ ನಿರ್ವಹಣೆಯ ವೆಚ್ಚಗಳು ಇತ್ಯಾದಿಗಳನ್ನು ಭೂಮಿ ಅಥವಾ ಕಟ್ಟಡದ ಅಧಿಭೋಗದಾರರಿಂದ ವಸೂಲಿಯವಾಗತಕ್ಕದ್ದು:–** (1) 6 ಮತ್ತು 7ನೇ ಪ್ರಕರಣಗಳ ಉಪಬಂಧಗಳ ಅನುಸರಣೆಯಲ್ಲಿ ಕೊಳಚೆ ಪ್ರದೇಶದಲ್ಲಿನ ಯಾವುದೇ ಭೂಮಿ ಅಥವಾ ಕಟ್ಟಡಕ್ಕೆ ಸಂಬಂಧಪಟ್ಟಂತೆ ಮೇಲ್ಪಾಟು ಕಾಮಗಾರಿಗಳನ್ನು ನಿರ್ವಹಿಸಿರುವಲ್ಲಿ ಅಂಥ ಮೇಲ್ಪಾಟಿನ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಮತ್ತು ಅಂಥ

ಮೇಲ್ಪಾಟು ಕಾಮಗಾರಿಗಳಿಂದ ಉಂಟಾದ ಸೌಕರ್ಯಗಳು ಮತ್ತು ಅನುಕೂಲತೆಗಳನ್ನು ಅನುಭವಿಸುವುದಕ್ಕೆ ಸಂಬಂಧಿಸಿದಂತೆ ನಿಯಮಿಸಿದ ಪ್ರಾಧಿಕಾರವು ಅಥವಾ ಸಂದರ್ಭಾನುಸಾರ ಯಾವುದೇ ಸ್ಥಳೀಯ ಪ್ರಾಧಿಕಾರ ವಹಿಸಿದ ವೆಚ್ಚಗಳನ್ನು ಭೂಕಂದಾಯ ಬಾಕಿಗಳಂತೆ ಭೂಮಿ ಅಥವಾ ಕಟ್ಟಡದ ಅಧಿಭೋಗದಾರ ಅಥವಾ ಅಧಿಭೋಗದಾರರುಗಳಿಂದ ವಸೂಲಿ ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವೆಚ್ಚಗಳ ಮೊಬಲಗನ್ನು ನಿಯಮಿಸಿದ ಪ್ರಾಧಿಕಾರವು ಆದೇಶದ ಮೂಲಕ ನಿರ್ಧರಿಸತಕ್ಕದ್ದು ಮತ್ತು ಸ್ಥಳೀಯ ಪ್ರಾಧಿಕಾರವು ವಹಿಸಿದ ವೆಚ್ಚಗಳ ಸಂದರ್ಭದಲ್ಲಿ ನಿಯಮಿಸಿದ ಪ್ರಾಧಿಕಾರವು, ಸ್ಥಳೀಯ ಪ್ರಾಧಿಕಾರವು ವಹಿಸಿದ ವೆಚ್ಚಗಳ ಮೊಬಲಗನ್ನು ನಿರ್ಧರಿಸುವ ಆದೇಶವನ್ನು ಮಾಡುವುದಕ್ಕೆ ಮುಂದೆ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸತಕ್ಕದ್ದು.

**9. ಮನುಷ್ಯ ವಾಸಕ್ಕೆ ಅಯೋಗ್ಯವಾದ ಕಟ್ಟಡವನ್ನು ಕೆಡವಿ ಹಾಕುವ ಆದೇಶವನ್ನು ಮಾಡಲು ನಿಯಮಿಸಿದ ಪ್ರಾಧಿಕಾರದ ಅಧಿಕಾರ.–** (1) ನಿಯಮಿಸಿದ ಪ್ರಾಧಿಕಾರಕ್ಕೆ ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರ ಅಥವಾ ರಾಜ್ಯ ಗೃಹ ಮಂಡಲಿ ಅಥವಾ ಈ ಉದ್ದೇಶಕ್ಕಾಗಿ ಸರ್ಕಾರದಿಂದ ಅಧಿಕೃತನಾದ ಅಧಿಕಾರಿಯು ಮಾಡಿದ ವರದಿಯ ಮೇಲೆ ಕೊಳಚೆ ಪ್ರದೇಶದಲ್ಲಿ ಮನುಷ್ಯ ವಾಸಕ್ಕೆ ಅಯೋಗ್ಯವಾಗಿರುವ ಯಾವುದೇ ಕಟ್ಟಡವನ್ನು ಯುಕ್ತ ವೆಚ್ಚದಲ್ಲಿ ಹಾಗೆ ಯೋಗ್ಯಗೊಳಿಸಲು ಸಾಧ್ಯವಾಗುವುದಿಲ್ಲವೆಂದು ತನಗೆ ಮನದಟ್ಟಾದರೆ ಕಟ್ಟಡದ ಒಡೆಯನಿಗೆ ಮತ್ತು ಬಾಡಿಗೆದಾರನಾಗಿಯಾಗಲಿ ಅಡಮಾನ ಪಡೆದವನಾಗಿ ಆಗಲಿ ಅಥವಾ ಅನ್ಯಥಾ ಆಗಲಿ ಕಟ್ಟಡದಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಇತರ ವ್ಯಕ್ತಿಗೆ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ, ಆ ಕಟ್ಟಡವನ್ನು ಕೆಡವಿ ಹಾಕಲು ಆದೇಶವನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣ ತೋರಿಸಲು ನೋಟೀಸನ್ನು ಅದು ಜಾರಿ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ, ನೋಟೀಸನ್ನು ಜಾರಿ ಮಾಡಲಾದ ಯಾವನೇ ವ್ಯಕ್ತಿಯು, ಅದರ ಅನುಸರಣೆಯಲ್ಲಿ ನಿಯಮಿಸಿದ ಪ್ರಾಧಿಕಾರದ ಮುಂದೆ ಹಾಜರಾದರೆ ಮತ್ತು ಆ ಪ್ರಾಧಿಕಾರಕ್ಕೆ, ಅಂಥ ವ್ಯಕ್ತಿಯು, ಸದರಿ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ, ಆ ಕಟ್ಟಡಕ್ಕೆ ಸಂಬಂಧಪಟ್ಟಂತೆ, ಸದರಿ ಪ್ರಾಧಿಕಾರದ ಅಭಿಪ್ರಾಯದಲ್ಲಿ, ಆ ಕಟ್ಟಡವನ್ನು ಮನುಷ್ಯ ವಾಸಕ್ಕೆ ಯೋಗ್ಯಗೊಳಿಸವು ಹಾಗೆ ಅಂಥ ಮೇಲ್ಪಾಟಿನ ಕೆಲಸಗಣನ್ನು ನಿರ್ವಹಿಸುವನೆಂದು ಅಥವಾ ಅದನ್ನು ಮನುಷ್ಯ ವಾಸಕ್ಕಾತಿ, ಆ ಉದ್ದೇಶಕ್ಕಾಗಿ ಅದನ್ನು ಯೋಗ್ಯಗೊಳಿಸಲಾಗಿದೆಯೆಂದು, ಅಂಥ ಪ್ರಾಧಿಕಾರವು ಸಮಾಧಾನಪಟ್ಟುಕೊಂಡು ಮೇಲೆ ವಚನಬಂಧವನ್ನು ರದ್ದುಪಡಿಸುವವರೆಗೆ ಅದನ್ನು ಉಪಯೋಗಿಸುವುದಿಲ್ಲವೆಂದು ಆ ಪ್ರಾಧಿಕಾರಕ್ಕೆ ವಚನಬಂಧವನ್ನು ಕೊಟ್ಟರೆ ನಿಯಮಿಸಿದಿ ಪ್ರಾಧಿಕಾರವು, ಕಟ್ಟಡವನ್ನು ಕೆಡವಿ ಹಾಕುವ ಆದೇಶವನ್ನು ಮಾಡತಕ್ಕದ್ದಲ್ಲ.

(3) (2)ನೇ ಉಪಪ್ರಕರಣದಲ್ಲಿ ತಿಳಿಸಲಾದಂತೆ, ಯಾವುದೇ ಅಂತಹ ವಚನಬಂಧವನ್ನು ಕೊಡದಿದ್ದರೆ ಅಥವಾ ಅಂತಹ ಯಾವುದೇ ವಚನಬಂಧವನ್ನು ಕೊಟ್ಟಿರುವ ಸಂದರ್ಭದಲ್ಲಿ ವಚನಬಂಧವು ಸಂಬಂಧಿಸುವ ಯಾವುದೇ ಮೇಲ್ಪಾಟು ಕೆಲಸವನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಕಾರ್ಯಗತಗೊಳಿಸದಿದ್ದರೆ ಅಥವಾ ಕಟ್ಟಡವನ್ನು ವಚನಬಂಧದ ನಿಬಂಧನೆಗಳನ್ನು ಉಲ್ಲಂಘಿಸಿ ಯಾವುದೇ ಕಾಲದಲ್ಲಿ ಉಪಯೋಗಿಸಿದೆ, ನಿಯಮಿಸಿದ ಪ್ರಾಧಿಕಾರವು, ನಿಯಮಿಸಬಹುದಾಂಥ ಅವಧಿಯೊಳಗೆ ಕಟ್ಟಡವನ್ನು ಕೆಡವಿ ಹಾಕತಕ್ಕುದೆಂದು ಅಗತ್ಯಪಡಿಸುವ ಕಟ್ಟಡವನ್ನು ಕೆಡವಿ ಹಾಕುವ ಆದೇಶವನ್ನು ತತ್‌ಕ್ಷಣ ಮಾಡತಕ್ಕದ್ದು.

**10. ಕಟ್ಟಡವನ್ನು ಕೆಡವಿ ಹಾಕಬೇಕೆಂಬ ಆದೇಶವನ್ನು ಮಾಡಿರುವಲ್ಲಿ ಅನುಸರಿಬೇಕಾದ ಪ್ರತಿಕ್ರಿಯೆ:–** ಕಟ್ಟಡವನ್ನು ಕೆಡವಿಸಬೇಕೆಂದು 9ನೇ ಪ್ರಕರಣದ ಮೇರೆಗೆ ಆದೇಶ ಮಾಡಿರುವಲ್ಲಿ ಕಟ್ಟಡದ ಒಡೆಯ ಅಥವಾ

ಅದರಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಇತರ ವ್ಯಕ್ತಿಯು, 9ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಹೇಳಿದ ಅವಧಿಯೊಳಗೆ ಆ ಕಟ್ಟಡವನ್ನು ಕೆಡವಿ ಹಾಕತಕ್ಕದ್ದು ಮತ್ತು ಕಟ್ಟಡವನ್ನು ಸದರಿ ಅವಧಿಯೊಳಗೆ ಕೆಡವಿ ಹಾಕದಿದ್ದರೆ, ನಿಯಮಿಸಿದ ಪ್ರಾಧಿಕಾರವು ಕಟ್ಟಡವನ್ನು ಪ್ರವೇಶಿಸತಕ್ಕದ್ದು ಮತ್ತು 61ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಅದರ ಸಾಮಗ್ರಿಗಳನ್ನು ಮಾರಾಟ ಮಾಡತಕ್ಕದ್ದು.

## ಅಧ್ಯಾಯ– V

## ಕೊಳಚೆ ಪ್ರದೇಶಗಳ ನಿರ್ಮೂಲನೆ ಮತ್ತು ಪುನರಭಿವೃದ್ಧಿ

**11. ಯಾವುದೇ ಕೊಳಚೆ ಪ್ರದೇಶವನ್ನು ಕೊಳಚೆ ನಿರ್ಮೂಲನಾ ಪ್ರದೇಶವೆಂದು ಘೋಷಿಸಲು ಅಧಿಕಾರ:–** (1) ಸರ್ಕಾರವು, ಮಂಡಲಿ ಅಥವಾ ರಾಜ್ಯ ಗೃಹ ನಿರ್ಮಾಣ ಮಂಡಲಿ ಅಥವಾ ಈ ಉದ್ದೇಶಕ್ಕಾಗಿ ಸರ್ಕಾರದಿಂದ ಅಧಿಕೃತನಾದ ಅಧಿಕಾರಿಯ ವರದಿಯ ಮೇಲೆ, ಯಾವುದೇ ಕೊಳಚೆ ಪ್ರದೇಶದ ಸಂಬಂಧದಲ್ಲಿ ಆ ಪ್ರದೇಶದ ಸ್ಥಿತಿಗತಿಗಳ ಬಗ್ಗೆ ಕೈಗೊಳ್ಳಬೇಕಾದ ತೃಪ್ತಿಕರವಾದ ವಿಧಾನವು ಆ ಪ್ರದೇಶವನ್ನು ನಿರ್ಮೂಲನೆ ಮಾಡುವುದು ಮತ್ತು ಆ ಪ್ರದೇಶದಲ್ಲಿನ ಎಲ್ಲ ಕಟ್ಟಡಗಳನ್ನು ಕೆಡವಿಹಾಕುವುದು ಎಂದು ಸರ್ಕಾರವು ಸಮಾಧಾನ ಹೊಂದಿದರೆ ಅಧಿಸೂಚನೆಯ ಮೂಲಕ ಆ ಪ್ರದೇಶವನ್ನು ಕೊಳಚೆ ನಿರ್ಮೂಲನ ಪ್ರದೇಶವೆಂದು ಅಂದರೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಎಲ್ಲ ಕಟ್ಟಡಗಳನ್ನು ನಿರ್ಮೂಲನೆ ಮಾಡಬೇಕಾಗಿರುವ ಒಂದು ಪ್ರದೇಶವನ್ನು ಘೋಷಿಸಬಹುದು:

ಪರಂತು, ಸರ್ಕಾರವು ಅಂಥ ಅಧಿಸೂಚನೆಯನ್ನು ಹೊರಡಿಸುವ ಮುಂಚೆ ಸರ್ಕಾರವು, ಅಂತಹ ಕೊಳಚೆ ಪ್ರದೇಶದಲ್ಲಿನ ಭೂಮಿಗಳ ಮತ್ತು ಕಟ್ಟಡಗಳ ಒಡೆಯರನ್ನು ಅಂಥ ಕೆಡವಿ ಹಾಕುವಿಕೆಯನ್ನು ಏಕೆ ಮಾಡಬಾರದೆಂಬುದಕ್ಕೆ ಕಾರಣ ತೋರಿಸಲು ಕೋರತಕ್ಕದ್ದು ಮತ್ತು ಆ ಒಡೆಯರು ತೋರಿಸಿದ ಕಾರಣವೇನಾದರೂ ಇದ್ದರೆ ಅದನ್ನು ಪರ್ಯಾಲೋಚಿಸಿದ ತರುವಾಯ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

(2) ಮನುಷ್ಯನ ವಾಸಕ್ಕೆ ಅಯೋಗ್ಯ ಅಥವಾ ಅಪಾಯಕಾರಿ ಅಥವಾ ಸುರಕ್ಷತೆಗೆ ಆರೋಗ್ಯಕ್ಕೆ ಅಥವಾ ನೈತಿಕತೆಗಳಿಗೆ ಹಾನಿಕರವಲ್ಲದಂಥ ಆ ಕೊಳಚೆ ಪ್ರದೇಶದಲ್ಲಿನ ಕೊಳಚೆ ಪ್ರದೇಶದ ಯಾವುದೇ ಭಾಗ ಅಥವಾ ಯಾವುದೇ ಕಟ್ಟಡವನ್ನು, ಸರ್ಕಾರವು ಅವಶ್ಯವೆಂದು ಪರಿಗಣಿಸಿದರೆ, (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯಿಂದ ಅವುಗಳನ್ನು ಹೊರತುಪಡಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯು ಕೆಡವಿ ಹಾಕಬೇಕಾಗಿರುವ ಪ್ರತಿಯೊಂದು ಕಟ್ಟಡ ಮತ್ತು ನಿರ್ಮೂಲನಗೊಳಿಸಬೇಕಾದ ಪ್ರದೇಶವನ್ನು ನಿರ್ದಿಷ್ಟಪಡಿಸತಕ್ಕದ್ದು.

**12. ಪ್ರದೇಶವನ್ನು ನಿರ್ಮೂಲನಗೊಳಿಸಲು ಮತ್ತು ಕಟ್ಟಡವನ್ನು ಕೆಡವಿ ಹಾಕಲು ಹೊಣೆಗಾರಿಕೆ:–** ಕೊಳಚೆ ಪ್ರದೇಶವನ್ನು 11ನೇ ಪ್ರಕರಣದ (ii)ನೇ ಉಪಪ್ರಕರಣದ ಮೇರೆಗೆ ಕೊಳಚೆ ನಿರ್ಮೂಲನ ಪ್ರದೇಶವೆಂದು ಘೋಷಿಸಿದಾಗ ಆ ಪ್ರದೇಶದಲ್ಲಿರುವ ಭೂಮಿಗಳು ಮತ್ತು ಕಟ್ಟಡಗಳ ಒಡೆಯರು ನಿಯಮಿಸಬಹುದಾದಂಥ ಅವಧಿ ಮುಕ್ತಾಯಕ್ಕೆ ಮುಂಚೆ, ಆ ಪ್ರದೇಶ ಖಾಲಿ ಮಾಡತಕ್ಕದ್ದು ಮತ್ತು ಕಟ್ಟಡಗಳನ್ನು ಕೆಡವಿ ಹಾಕತಕ್ಕದ್ದು.

**13. ಕೊಳಚೆ ನಿರ್ಮೂಲನ ಪ್ರದೇಶಗಳನ್ನು ನಿರ್ಮೂಲನ ಮಾಡುವ ಅಧಿಕಾರ:–** 12ನೇ ಪ್ರಕರಣದಲ್ಲಿ ನಮೂದಿಸಿದ ಅವಧಿಯ ಮುಕ್ತಾಯಕ್ಕೆ ಮುಂಚೆ ಯಾವುದೇ ಕೊಳಚೆ ನಿರ್ಮೂಲನ ಪ್ರದೇಶವನ್ನು ನಿರ್ಮೂಲನ ಮಾಡದಿದ್ದರೆ ಅಥವಾ ಕಟ್ಟಡಗಳನ್ನು ಕೆಡವಿ ಹಾಕದಿದ್ದರೆ ನಿಯಮಿಸಿದ ಪ್ರಾಧಿಕಾರವು ಆ ಪ್ರದೇಶವನ್ನು

ಪ್ರವೇಶಿಸತಕ್ಕದ್ದು ಮತ್ತು ಪ್ರದೇಶವನ್ನು ನಿರ್ಮೂಲನ ಮಾಡತಕ್ಕದ್ದು ಮತ್ತು ಕಟ್ಟಡಗಳನ್ನು ಕೆಡವಿ ಹಾಕತಕ್ಕದ್ದು ಮತ್ತು 61ನೇ ಪ್ರಕರಣದ ಉಪಬಂಧಗಳಿಗೆಗೊಳಪಟ್ಟು ಅದರ ಸಾಮಗ್ರಿಗಳನ್ನು ಮಾರಾಟ ಮಾಡತಕ್ಕದ್ದು.

**14. ಒಡೆಯನು ಪುನರಭಿವೃದ್ಧಿಪಡಿಸಬಹುದು.–** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು 11ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುವಲ್ಲಿ ಅಧಿಸೂಚನೆಯು ಅನ್ವಯವಾಗುವಂಥ ಭೂಮಿಯ ಒಡೆಯನು ನಿಯಮಿಸಿದ ಪ್ರಾಧಿಕಾರವು ಅನುಮೋದಿಸಿದ ಯೋಜನೆಗಳಿಗನುಸಾರವಾಗಿ ಆ ಪ್ರಾಧಿಕಾರವು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಪರಿಬಂಧಗಳು ಮತ್ತು ಷರತ್ತುಗಳೇನಾದರೂ ಇದ್ದರೆ ಪುನರಭಿವೃದ್ಧಿಯನ್ನು ಯಾವ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದೋ, ಆ ಕಾಲಕ್ಕೆ ಸಂಬಂಧಿಸಿದ ಷರತ್ತನ್ನು ಒಳಗೊಂಡು ಅವುಗಳಿಗೊಳಪಟ್ಟು ಭೂಮಿಯನ್ನು ಪುನರಭಿವೃದ್ಧಿಪಡಿಸಬಹುದು:

ಪರಂತು, ಒಡೆಯನು ತನ್ನ ಭೂಮಿಯನ್ನು ಉಪಯೋಗಿಸಿದ ಮೇಲೆ ಹಾಗೆ ವಿಧಿಸಲಾದ ಪರಿಬಂಧ ಅಥವಾ ಷರತ್ತಿನಿಂದ ಅಥವಾ ಯಾವುದೇ ಅಂಥ ಪರಿಬಂಧ ಅಥವಾ ಷರತ್ತನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ನಿಯಮಿಸಿದ ಪ್ರಾಧಿಕಾರದ ನಂತರದ ನಿರಾಕರಣೆಯಿಂದ ಸಂಕಷ್ಟಕ್ಕೀಡಾಗಿರುವ ಒಡೆಯನು ನಿಯಮಿಸಬಹುದಾದಂಥ ಕಾಲದೊಳಗೆ ಸರ್ಕಾರಕ್ಕೆ ಅಪೀಲು ಮಾಡಬಹುದು ಮತ್ತು ಸರ್ಕಾರವು ಈ ವಿಷಯದಲ್ಲಿ ಅದು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2) (1)ನೇ ಉಪ್ರಕರಣದ ಮೇರೆಗೆ ಅನುಮೋದಿಸಿದ ನಕ್ಷೆ ಅಥವಾ ವಿಧಿಸಿದ ಪರಿಬಂಧ ಅಥವಾ ಷರತ್ತನ್ನು ಉಲ್ಲಂಘಿಸಿ ಯಾವುದೇ ಕೆಲಸವನ್ನು ಯಾವನೇ ವ್ಯಕ್ತಿಯು ಪ್ರಾರಂಭಿಸತಕ್ಕದ್ದಲ್ಲ ಅಥವಾ ಪ್ರಾರಂಭಿಸುವಂತೆ ಮಾಡತಕ್ಕದ್ದಲ್ಲ.

**15. ನಿರ್ಮೂಲನ ಪ್ರದೇಶವನ್ನು ಪುನರಭಿವೃದ್ಧಿಗೆ ನಿಯಮಿಸಿದ ಪ್ರಾಧಿಕಾರದ ಅಧಿಕಾರ:–** 14ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನಿಯಮಿಸಿದ ಪ್ರಾಧಿಕಾರವು ಈ ಅಧ್ಯಾಯದ ಹಿಂದೆ ಹೇಳಿದ ಉಪಬಂಧಗಳಿಗನುಸಾರವಾಗಿ ಆ ಭೂಮಿಯನ್ನು ಬರಿದು ಮಾಡಿದ ತರುವಾಯ ಮತ್ತು ಕಟ್ಟಡಗಳನ್ನು ಕೆಡವಿ ಹಾಕಿದ ತರುವಾಯ ಅದರ ಒಡೆಯನು, ಆ ಭೂಮಿಯ ಪುನರ್ ಅಭಿವೃದ್ಧಿಯ ಕೆಲಸವನ್ನು ಪ್ರಾರಂಭಿಸುವ ಮುಂಚೆ ಯಾವುದೇ ಕಾಲದಲ್ಲಿ, ಅಂಥ ಪ್ರಾಧಿಕಾರವು ಸಾರ್ವಜನಿಕ ಹಿತದೃಷ್ಟಿಯಲ್ಲಿ ಹಾಗೆ ಮಾಡುವುವುದು ಅವಶ್ಯವೆಂದು ಸಮಾಧಾನ ಹೊಂದಿದರೆ ಆದೇಶದ ಮೂಲಕ ಭೂಮಿಯನ್ನು ಪುನರಭಿವೃದ್ಧಿಪಡಿಸಲು ನಿರ್ಧರಿಸಬಹುದು.

(2) ಈ ಅಧ್ಯಾಯದಲ್ಲಿ ಹಿಂದೆ ಹೇಳಿದ ಉಪಬಂಧಗಳಿಗನುಸಾರವಾಗಿ ಭೂಮಿಯನ್ನು ಬರಿದು ಮಾಡಿರುವಲ್ಲಿ ಮತ್ತು ಕಟ್ಟಡಗಳನ್ನು ಕೆಡವಿ ಹಾಕಿರುವಲ್ಲಿ ಮತ್ತು ಪ್ರಾಧಿಕಾರದಿಂದ ಅನುಮೋದಿತವಾದ ನಕ್ಷೆಗಳನ್ನು ಅಥವಾ 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಧಿಸಲಾದ ಯಾವುದೇ ಪರಿಬಂಧಗಳು ಅಥವಾ ಷರತ್ತುಗಳನ್ನು ಉಲ್ಲಂಘಿಸಿ, ಅದರ ಒಡೆಯನು ಭೂಮಿಯನ್ನು ಪುನರ್ ಅಭಿವೃದ್ಧಿಪಡಿಸಿದ್ದವೆಂದು ಅಥವಾ ಪುನರ್ ಅಭಿವೃದ್ಧಿಪಡಿಸುತ್ತಿದ್ದವೆಂದು ಅಥವಾ ಅಂಥ ಷರತ್ತುಗಳ ಮೇರೆಗೆ ನಿರ್ದಿಷ್ಟಪಡಿಸಿದ ಕಾಲ ಯಾವುದಾದರೂ ಇದ್ದರೆ, ಅದರೊಳಗೆ ಪುನರ್ ಅಭಿವೃದ್ಧಿಪಡಿಸಿಲ್ಲವೆಂದು ನಿಯಮಿಸಿದ ಪ್ರಾಧಿಕಾರಕ್ಕೆ ಮನದಟ್ಟಾದರೆ ಅದು ಆದೇಶದ ಮೂಲಕ ಭೂಮಿಯನ್ನು ಪುನರ್ ಅಭಿವೃದ್ಧಿಪಡಿಸಲು ನಿರ್ಧರಿಸಬಹುದು:

ಪರಂತು, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಮುಂಚೆ, ಆದೇಶವನ್ನು ಏಕೆ ಮಾಡಬಾರದೆಂಬುದಕ್ಕೆ ಕಾರಣ ತೋರಸಲು ಒಡೆಯನಿಗೆ ಅವಕಾಶ ಕೊಡತಕ್ಕದ್ದು.

(8) ಈ ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು ವಹಿಸಿದ ಎಲ್ಲ ವೆಚ್ಚಗಳನ್ನು ಆ ವೆಚ್ಚಗಳಿಗಾಗಿ ತಗಾದೆ ಮಾಡಿದಂಥ ದಿನಾಂಕದಿಂದ ಸಂದಾಯ ಮಾಡುವವರಿಗೆ, ಸರ್ಕಾರವು ಆದೇಶದ ಮೂಲಕ ನಿಗದಿಪಡಿಸುವಂಥ ದರದಲ್ಲಿ ಬಡ್ಡಿ ಸಮೇತ ಭೂಮಿಯ ಒಡೆಯನಿಂದ ಭೂ ಕಂದಾಯದ ಬಾಕಿಯೆಂಬಂತೆ ನಿಯಮಿತ ಪ್ರಾಧಿಕಾರವು ವಸೂಲು ಮಾಡಬಹುದು ಮತ್ತು ಅಂತಹ ಎಲ್ಲಾ ವೆಚ್ಚಗಳು ಮತ್ತು ಬಡ್ಡಿಯು ಭೂಮಿ ಮತ್ತು ಕಟ್ಟಡದ ಮೇಲೆ ಋಣಭಾರವಾಗಿರತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವೆಚ್ಚಗಳ ಮೊಬಲಗನ್ನು ನಿಯಮಿಸಿದ ಪ್ರಾಧಿಕಾರವು ಆದೇಶದ ಮೂಲಕ ನಿರ್ಧರಿಸತಕ್ಕುದು.

**16. ಹಿಂದಿನ ಅಧಿಭೋಗದಾರರಿಗೆ ವರ್ಗಾವಣೆಗಾಗಿ ಉಪಬಂಧಿಸಲು ನಿಯಮಗಳು:–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸರ್ಕಾರವು, ಮತ್ತು ಯಾವುದೇ ಕೊಳಚೆ ಪ್ರದೇಶವನ್ನು ಕೊಳಚೆ ನಿರ್ಮೂಲನ ಪ್ರದೇಶವೆಂದು ಘೋಷಿಸುವ ನಿಕಟಪೂರ್ವದಲ್ಲಿ, ಆ ಪ್ರದೇಶದಲ್ಲಿ ಭೂಮಿಗಳು ಅಥವಾ ಕಟ್ಟಡಗಳನ್ನು ಅಥವಾ ಅದರ ಪುನರ್ ಅಭಿವೃದ್ಧಿ ತರುವಾಯ ಅಂಥ ಕೊಳಚೆ ನಿರ್ಮೂಲನ ಪ್ರದೇಶದಲ್ಲಿ ಭೂಮಿಗಳು ಅಥವಾ ಕಟ್ಟಡಗಳನ್ನು ಅಧಿಭೋಗಿಸುತ್ತಿದ್ದ ವ್ಯಕ್ತಿಗಳಿಗೆ ನಿಯಮಗಳ ಮೂಲಕ ವರ್ಗಾವಣೆಗೆ ಉಪಬಂಧಿಸಬಹುದು ಅಥವಾ ವರ್ಗಾವಣೆಯನ್ನು ನಿಯಂತ್ರಿಸಬಹುದು ಮತ್ತು ಅಂಥ ವರ್ಗಾವಣೆಗಾಗಿ ಷರತ್ತುಗಳನ್ನು ಉಪಬಂಧಿಸಬಹುದು ಅಥವಾ ನಿಯಂತ್ರಿಸಬಹುದು.

## ಅಧ್ಯಾಯ–VI

## ಭೂಮಿಯ ಆರ್ಜನೆ

**17. ಭೂಮಿಯನ್ನು ಅರ್ಜಿಸಲು ಅಧಿಕಾರಿ:–** ಯಾವುದೇ ಕೊಳಚೆ ಪ್ರದೇಶ ಅಥವಾ ಅಂಥ ಪ್ರದೇಶದಲ್ಲಿನ ಯಾವುದೇ ಕಟ್ಟಡದ ಸಂಬಂಧದಲ್ಲಿ ಮೇಲ್ಪಾಟಿನ ಯಾವುದೇ ಕೆಲಸವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಅಥವಾ ಯಾವುದೇ ಕೊಳಚೆ ನಿರ್ಮೂಲನಾ ಪುನರಭಿವೃದ್ಧಪಡಿಸುವ ಉದ್ದೇಶಕ್ಕಾಗಿ ಅಥವಾ ಕೊಳಚೆ ನಿವಾಸಿಗಳ ಪುನರ್ ವಸತಿಯ ಉದ್ದೇಶಕ್ಕಾಗಿ ಅಂಥ ಪ್ರದೇಶದಲ್ಲಿ ಅದಕ್ಕೆ ಹೊಂದಿಕೊಂಡಿರುವ ಅಥವಾ ಅದನ್ನು ಆವರಿಸಿರುವ ಯಾವುದೇ ಭೂಮಿಯನ್ನು ಅರ್ಜಿಸುವುದು ಅವಶ್ಯವೆಂದು ಸರ್ಕಾರಕ್ಕೆ ಮನದಟ್ಟಾದರೆ, ಅದು ಈ ಪ್ರಕರಣದ ಅನುಸರಣೆಯಲ್ಲಿ ಭೂಮಿಯನ್ನು ಅರ್ಜಿಸಲು ನಿರ್ಧರಿಸಲಾಗಿದೆಯೆಂಬ ಬಗ್ಗೆ ನೋಟೀಸನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ ಭೂಮಿಯನ್ನು ಅರ್ಜಿಸಬಹುದು:

ಪರಂತು, ಅಂಥ ನೋಟೀಸನ್ನು ಪ್ರಕಟಿಸುವ ಮೊದಲು, ಸರ್ಕಾರವು, ಒಡೆಯನನ್ನು ಅಥವಾ ಸರ್ಕಾರದ ಅಂಥ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾವನೇ ಇತರ ವ್ಯಕ್ತಿಗೆ ಅದನ್ನು ಏಕೆ ಆರ್ಜಿಸಬಾರದೆಂಬುದಕ್ಕೆ ಕಾರಣ ತೋರಿಸಲು ಕೋರತಕ್ಕದ್ದು ಮತ್ತು ಒಡೆಯ ಅಥವಾ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ಯಾವನೇ ಇತರ ವ್ಯಕ್ತಿಯು ತೋರಿಸಿದ ಕಾರಣವು ಯಾವುದಾದರೂ ಇದ್ದರೆ, ಅದನ್ನು ಪರ್ಯಾಲೋಚಿಸದ ತರುವಾಯ, ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

**18. ಆರ್ಜಿಸಿದ ಭೂಮಿಯು ಎಲ್ಲ ಅಧಿಭಾರಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.–** 17ನೇ ಪ್ರಕರಣದ ಮೇರೆಗಿನ ನೋಟೀಸನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದಾಗ, ಸದರಿ ನೋಟೀಸು ಯಾವ ಭೂಮಿಗೆ ಸಂಬಂಧಿಸಿದೆಯೋ, ಅದು, ನೋಟೀಸನ್ನು ಪ್ರಕಟಿಸಿದ ದಿನಾಂಕದಂದು ಮತ್ತು ಅಲ್ಲಿಂದ ಎಲ್ಲಾ ಋಣಭಾರಗಳಿಂದ ಮುಕ್ತವಾಗಿ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗತಕ್ಕದ್ದು.

**19. ಮೊಬಲಗು ಸ್ವೀಕರಿಸಲು ಹಕ್ಕು:–** ಈ ಅಧಿನಿಯಮದ ಮೇರೆಗೆ ಅರ್ಜಿಸಿದ ಯಾವುದೇ ಭೂಮಿಯಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿದ ಪ್ರತಿಯೊಬ್ಬ ವ್ಯಕ್ತಿಯು, ಈ ಮುಂದೆ ಇದರಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಮೊಬಲಗನ್ನು ಸ್ವೀಕರಿಸಲು ಅರ್ಹನಾಗತಕ್ಕದ್ದು ಮತ್ತು ಅವನಿಗೆ ಸಂದಾಯ ಮಾಡತಕ್ಕದ್ದು.

**20. ಸಂದಾಯ ಮಾಡಬೇಕಾದ ಮೊಬಲಗು:–** (1) ಈ ಅಧಿನಿಯಮದ ಮೇರೆಗೆ ಆರ್ಜಿಸಿದ ಯಾವುದೇ ಭೂಮಿಯ ಸಂಬಂಧದಲ್ಲಿ ಸಂದಾಯವಾಗಬೇಕಾದ ಮೊಬಲಗು ಅಂಥ ಪ್ರದೇಶಕ್ಕೆ ಅನ್ವಯವಾಗುವ ಪೌರಸಭಾ ಕಾನೂನಿನ ಮೇರೆಗೆ 17ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ನೋಟೀಸಿನ ಪ್ರಕಟಣಾ ದಿನಾಂಕದಂದು ಅಂಥ ಭೂಮಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಸ್ವತ್ತು ತೆರಿಗೆಯ ನೂರುಪಟ್ಟು ಇರತಕ್ಕದ್ದು ಮತ್ತು ಅಂಥ ಭೂಮಿಯ ಸಂಬಂಧದಲ್ಲಿ ಅಂಥ ಯಾವುದೇ ಸ್ವತ್ತು ತೆರಿಗೆಯನ್ನು ಸಂದಾಯ ಮಾಡಬೇಕಾಗಿರದ ಸಂದರ್ಭದಲ್ಲಿ, ಅದಕ್ಕೆ ಹೊಂದಿಕೊಂಡಿರುವ ಅಂತಹುದೇ ಭೂಮಿಯ ಬಗ್ಗೆ ಸಂದಾಯ ಮಾಡಬೇಕಾಗಿರುವ ಸ್ವತ್ತು ತೆರಿಗೆಯಾಗಿರತಕ್ಕದ್ದು.

(2) ನಿಯಮಿಸಿದ ಪ್ರಾಧಿಕಾರವು, ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಿದ ತರುವಾಯ (1)ನೇ ಉಪಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಮೊಬಲಗನ್ನು ಆದೇಶದ ಮೂಲಕ ನಿರ್ಧರಿಸತಕ್ಕದ್ದು ಮತ್ತು ಸದರಿ ಆದೇಶವನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು. ಸದರಿ ಆದೇಶದ ಒಂದು ಪ್ರತಿಯನ್ನು ಭೂಮಿ ಒಡೆಯನಿಗೆ ಮತ್ತು ಅದರಲ್ಲಿ ಹಿತಾಸಕ್ತಿವುಳ್ಳ ಪ್ರತಿಯೊಬ್ಬ ವ್ಯಕ್ತಿಗೆ ಕಳುಹಿಸತಕ್ಕದ್ದು.

(3) ಭೂಮಿಯ ಒಡೆಯ ಮತ್ತು ಅಂಥ ಭೂಮಿಯ ಮೇಲಿನ ಕಟ್ಟಡದ ಒಡೆಯ ಬೇರೆ ಬೇರೆಯಾಗಿದ್ದಲ್ಲಿ, ನಿಯಮಿಸಿದ ಪ್ರಾಧಿಕಾರವು ಭೂಮಿಯ ಒಡೆಯ ಮತ್ತು ಕಟ್ಟಡದ ಒಡೆಯರ ನಡುವೆ ಮೊಬಲಗನ್ನು (ಅರ್ಜನೆಯ ದಿನಾಂಕದಂದು ಕಟ್ಟಡದ ಮೌಲ್ಯಕ್ಕೆ ಭೂಮಿಯ ಮೌಲ್ಯವು ಹೊಂದಿರುವಂಥದೇ ಪ್ರಮಾಣದಲ್ಲಿ) ಹಂಚತಕ್ಕದು.

**21. ಮೊಬಲಗನ್ನು ನಿಗದಿಪಡಿಸುವ ಆದೇಶದ ವಿರುದ್ಧ ಅಪೀಲು:–** (1) 20ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು ನಿರ್ಧರಿಸಲಾದ ಮೊಬಲಗಿಗೆ ಒಪ್ಪದಿರುವ ಯಾವನೇ ವ್ಯಕ್ತಿಯು, ನಿಯಮಿಸಬಹುದಾದಂಥ ಅವಧಿಯೊಳಗೆ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**22. ಮೊಬಲಗಿನ ಹಂಚಿಕೆ:–** (1) ನಿರ್ಧರಿಸಲಾದ ಮೊಬಲಗಿನಲ್ಲಿ ಹಿತಾಸಕ್ತಿವುಳ್ಳವರಾಗಿ ಹಲವಾರು ವ್ಯಕ್ತಿಗಳು ಕ್ಲೇಮು ಮಾಡುವಲ್ಲಿ ನಿಯಮಿಸಿದ ಪ್ರಾಧಿಕಾರವು ತನ್ನ ಅಭಿಪ್ರಾಯದಲ್ಲಿ ಮೊಬಲಗನ್ನು ಸ್ವೀಕರಿಸಲು ಹಕ್ಕುಳ್ಳವರಾದ ವ್ಯಕ್ತಿಗಳನ್ನು ಮತ್ತು ಅವರಲ್ಲಿ ಪ್ರತಿಯೊಬ್ಬರಿಗೆ ಸಂದಾಯವಾಗಬೇಕಾದ ಮೊಬಲಗನ್ನು ನಿರ್ಧರಿಸತಕ್ಕದ್ದು.

(2) ಮೊಬಲಗಿನ ಅಥವಾ ಅದರ ಯಾವುದೇ ಭಾಗದ ಹಂಚಿಕೆಯ ಬಗ್ಗೆ ಅಥವಾ ಅದನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡಬೇಕಾದ ವ್ಯಕ್ತಿಗಳ ಬಗ್ಗೆ ಯಾವುದೇ ವಿವಾದ ಉದ್ಭವಿಸಿದರೆ, ನಿಯಮಿಸಿದ ಪ್ರಾಧಿಕಾರವು ಅಂಥ ವಿವಾದಗಳನ್ನು ನ್ಯಾಯಾಲಯದ ತೀರ್ಮಾನಕ್ಕೆ ಒಪ್ಪಿಸಬಹುದು ಮತ್ತು ನ್ಯಾಯಾಲಯವು ಯಾವುದೇ ಅಂತಹ ವಿವಾದಗಳನ್ನು ತೀರ್ಮಾನಿಸುವಲ್ಲಿ ಅದಷ್ಟು ಮಟ್ಟಿಗೆ 1894ರ ಭೂ ಅರ್ಜನೆ ಅಧಿನಿಯಮದ (1894ರ ಕೇಂದ್ರಾಧಿನಿಯಮ 1) ಭಾಗ IIIರ ಉಪಬಂಧಗಳನ್ನು ಅನುಸರಿಸತಕ್ಕದ್ದು.

**23. ಮೊಬಲಗಿನ ಸಂದಾಯ.–** (1) ಮೊಬಲಗನ್ನು ನಿರ್ಧರಿಸಿದ ತರುವಾಯ ನಿಯಮಿಸಿದ ಪ್ರಾಧಿಕಾರವು, ಅದಕ್ಕೆ ಹಕ್ಕುಳ್ಳ ವ್ಯಕ್ತಿಗಳಿಗೆ, ಮೊಬಲಗಿನ ಸಂದಾಯವನ್ನು ಕೂಡ ಮಾಡತಕ್ಕದ್ದು ಮತ್ತು ಅದನ್ನು ಅವರಿಗೆ ಸಂದಾಯ ಮಾಡತಕ್ಕದ್ದು.

(2) ಆ ಮೊಬಲಗಿಗೆ ಹಕ್ಕುಳ್ಳ ವ್ಯಕ್ತಿಗಳು ಅದನ್ನು, ಸ್ವೀಕರಿಸಲು ಒಪ್ಪದಿದ್ದರೆ ಅಥವಾ ಭೂಮಿಯನ್ನು ಪರಭಾರೆ ಮಾಡುವುದಕ್ಕೆ ಸಕ್ಷಮನಾದ ವ್ಯಕ್ತಿ ಯಾರೂ ಇಲ್ಲದಿದ್ದರೆ, ಅಥವಾ ಮೊಬಲಗನ್ನು ಸ್ವೀಕರಿಸುವ ಸ್ವಾಮ್ಯದ ಬಗ್ಗೆ ಅಥವಾ ಅದರ ಹಂಚಿಕೆಯ ಬಗ್ಗೆ ಯಾವುದೇ ವಿವಾದಗಳನ್ನು ನಿಯಮಿಸಿದ ಪ್ರಾಧಿಕಾರವು ನ್ಯಾಯಾಲಯದಲ್ಲಿ ಮೊಬಲಗನ್ನು ಠೇವಣಿ ಇಡತಕ್ಕದ್ದು ಮತ್ತು ನ್ಯಾಯಾಲಯವು ಹಾಗೆ ಠೇವಣಿ ಇಡಲಾದ ಮೊಬಲಗಿನ ಬಗ್ಗೆ 1984ರ ಭೂ ಅರ್ಜನೆ ಅಧಿನಿಯಮದ (1894ರ ಕೇಂದ್ರ ಅಧಿನಿಯಮ 1) 32 ಮತ್ತು 33ನೇ ಪ್ರಕರಣಗಳಲ್ಲಿ ವಿಧಿಸಿದ ರೀತಿಯಲ್ಲಿ ವ್ಯವಹರಿಸತಕ್ಕದ್ದು.

**24. ಬಡ್ಡಿಯ ಸಂದಾಯ:–** ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಅಥವಾ ಅದಕ್ಕೆ ಮುಂದೆ ಮೊಬಲಗನ್ನು ಸಂದಾಯ ಮಾಡದಿದ್ದರೆ ಅಥವಾ ಠೇವಣಿ ಇಡದಿದ್ದಾಗ ನಿಯಮಿಸಿದ ಪ್ರಾಧಿಕಾರವು, ಸ್ವಾಧೀನವನ್ನು ಹಾಗೆ ತೆಗೆದುಕೊಂಡ ಕಾಲದಿಂದ ಅದನ್ನು ಹಾಗೆ ಸಂದಾಯ ಅಥವಾ ಠೇವಣಿ ಇಡುವವರೆಗೆ ವರ್ಷಕ್ಕೆ ಶೇಕಡ ಐದರ ದರದಲ್ಲಿ ಅದರ ಮೇಲಿನ ಬಡ್ಡಿಯೊಂದಿಗೆ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಬಡ್ಡಿಯನ್ನು ನಿಯಮಿಸಿದ ಪ್ರಾಧಿಕಾರವು ಮೊಬಲಗಿಗೆ ಉಪಬಂಧಿಸಿರುವಂಥ ರೀತಿಯಲ್ಲಿಯೇ ಸಂದಾಯ ಮಾಡತಕ್ಕುದು ಅಥವಾ ಠೇವಣಿ ಇಡತಕ್ಕದ್ದು.

**25. ಉಚ್ಚ ನ್ಯಾಯಾಲಯಕ್ಕೆ ಅಪೀಲು:–** ಮೂಲ ಡಿಕ್ರಿಗಳಿಂದ ಅಪೀಲುಗಳಿಗೆ ಅನ್ವಯಿಸುವ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಿಯಮ 5) ಉಪಬಂಧಗಳಿಗೆ ಒಳಪಟ್ಟು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯಲ್ಲಿ ತದ್ವಿರುದ್ಧವಾಗಿ ಏನೇ ಇದ್ದಾಗ್ಯೂ, ಈ ಅಧಿನಿಯಮದ ಮೇರೆಗೆ ನ್ಯಾಯಾಲಯದ ಯಾವುದೇ ತೀರ್ಮಾನದಿಂದ ಉಚ್ಚ ನ್ಯಾಯಾಲಯಕ್ಕೆ ಎರಡನೇ ಅಪೀಲು ಮಾತ್ರ ಇರತಕ್ಕುದು.

**26. ಮೊಬಲಗಿನ ನಿರ್ಧಾರಣೆಗೆ ಸಂಬಂಧಿಸಿದಂತೆ ನಿಯಮಿಸದ ಪ್ರಾಧಿಕಾರದ ಅಧಿಕಾರ:–** (1) ನಿಯಮಿಸಿದ ಪ್ರಾಧಿಕಾರವು 20, 22, 23 ಮತ್ತು 24ನೇ ಪ್ರಕರಣಗಳ ಉಪಬಂಧಗಳನ್ನು ಈಡೇರಿಸುವ ಉದ್ದೇಶಕ್ಕಾಗಿ, ಆದೇಶದ ಮೂಲಕ ಈ ಅಧಿನಿಯಮದ ಮೇರೆಗೆ ಆರ್ಜಿಸಲಾದ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಭೂಮಿಗೆ ಸಂಬಂಧಿಸಿದಂತೆ ತನ್ನ ಸ್ವಾಧೀನದಲ್ಲಿರುವಂಥ ಮಾಹಿತಿಯನ್ನು ಒದಗಿಸಲು ಯಾವನೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(2) ನಿಯಮಿಸಿದ ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ವಿಚಾರಣೆಯನ್ನು ನಡೆಸುವಲ್ಲಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಿಯಮದ 5) ಮೇರೆಗೆ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ದಾವೆಯನ್ನು ವಿಚಾರಣೆ ಮಾಡುವಲ್ಲಿ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಕ) ಸಮನು ಮಾಡುವುದು ಮತ್ತು ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಪಡಿಸುವುದು ಹಾಗೂ ಅವನನ್ನು ಪ್ರಮಾಣದ ಮೇಲೆ ವಿಚಾರಣೆ ಮಾಡುವುದು;

(ಖ) ಯಾವುದೇ ದಸ್ತಾವೇಜನ್ನು ಶೋಧಿಸಲು ಮತ್ತು ಹಾಜರುಪಡಿಸಲು ಅಗತ್ಯಪಡಿಸುವುದು;

(ಗ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಘ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕಡ್ಡಾಯವಾಗಿ ಕೋರುವುದು;

(ಙ) ಸಾಕ್ಷಿಗಳ ವಿಚಾರಣೆಗಾಗಿ ಕಮೀಷನನ್ನು ಹೊರಡಿಸುವುದು;

**27. ಅರ್ಜಿಸಿದ ಭೂಮಿಯ ಉಪಯೋಗ:–** (1) ಈ ಅಧಿನಿಯಮದ ಮೇರೆಗೆ ಯಾವುದೇ ಭೂಮಿಯನ್ನು ಆರ್ಜಿಸಿರುವಲ್ಲಿ, ಸರ್ಕಾರವು, ಭೂಮಿಯ ಮೇಲ್ಪಾಟು, ಅಭಿವೃದ್ಧಿ, ನಿರ್ಮೂಲನೆ ಅಥವಾ ಪುನರ್ ಅಭಿವೃದ್ಧಿಗೆ ಅವಶ್ಯವಾದಂತಹ ಕ್ರಮಗಳನ್ನು ಅಥವಾ ಅದು ಅನುಮೋದಿಸಿರಬಹುದಾದಂಥ ನಕ್ಷೆಗನುಸಾರವಾಗಿ ಅದರ ಮೇಲೆ ಯಾವುದೇ ಕಟ್ಟಡ ಅಥವಾ ಕಟ್ಟಡಗಳ ನಿರ್ಮಾಣವನ್ನು ಕೈಗೊಳ್ಳಬಹುದು ಅಥವಾ ಕೈಗೊಳ್ಳುವಂತೆ ಮಾಡಬಹುದು.

(2) (i) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಕ್ರಮಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಸರ್ಕಾರವು ಭೂಮಿಯನ್ನು ತನ್ನ ಸ್ವಂತ ನಿಯಂತ್ರಣದಲ್ಲಿ ಮತ್ತು ವ್ಯವಸ್ಥಾಪನೆಯಲ್ಲಿ ಇಟ್ಟುಕೊಳ್ಳಬಹುದು ಮತ್ತು ಅಂಥ ಕ್ರಮಗಳನ್ನು ತಾನೇ ಅಥವಾ ಅದು ನಿರ್ಧರಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಮಂಡಲಿಯ ಮೂಲಕ ಕೈಗೊಳ್ಳಬಹುದು ಅಥವಾ ಆ ಕ್ರಮಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಮಂಡಲಿಗೆ ಭೂಮಿಯನ್ನು ವರ್ಗಾಯಿಸಬಹುದು.

(iii) (1)ನೇ ಖಂಡದಲ್ಲಿ ಉಪಬಂಧಿಸಲಾದಂತೆ, ಭೂಮಿಯನ್ನು ವರ್ಗಾವಣೆ ಮಾಡಿರುವ ಅಂತಹ ಭೂಮಿಯನ್ನು ಸಂದರ್ಭಾನುಸಾರ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರ ಅಥವಾ ಮಂಡಲಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಸ್ಥಳೀಯ ಪ್ರಾಧಿಕಾರ ಅಥವಾ ಮಂಡಲಿಯು,

(ಕ) ಸರ್ಕಾರವು ಅಂತಹ ಸಂದರ್ಭಗಳನ್ನು ನಿರ್ಧರಿಸಬಹುದಾದಂತೆ ಭೂಮಿಯ ಅಥವಾ ಅದರ ಅಂತಹ ಭಾಗದ ಆರ್ಜನೆಯ ಖರ್ಚನ್ನು, ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(ಖ) ಸರ್ಕಾರವು, ಅನುಮೋದಿಸಬಹುದಾದಂತಹ ನಕ್ಷೆಗಳಿಗನುಸಾರವಾಗಿ ಮತ್ತು ಸರ್ಕಾರವು ಕಾಲಕಾಲಕ್ಕೆ ಕೊಡಬಹುದಾದಂತಹ ನಿರ್ದೇಶನಗಳಿಗೊಳಪಟ್ಟು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

## ಅಧ್ಯಾಯ– VII

## ಹೊರಹಾಕುವುದರಿಂದ ಕೊಳಚೆ ಪ್ರದೇಶಗಳಲ್ಲಿಯ ಬಾಡಿಗೆದಾರರನ್ನು ರಕ್ಷಿಸುವುದು

**28. ನಿಯಮಿಸಿದ ಪ್ರಾಧಿಕಾರದ ಅನುಮತಿ ಇಲ್ಲದೆ ಬಾಡಿಗೆದಾರರನ್ನು ಹೊರ ಹಾಕುವುದು ವ್ಯವಹರಣೆಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ:–**

(1) ತತ್ಕಾಲದಲ್ಲಿ ಜಾರಿಯಲ್ಲಿರುವ, ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ನಿಯಮಿಸಿದ ಪ್ರಾಧಿಕಾರದ ಬರಹದಲ್ಲಿನ ಪೂರ್ವಾನುಮತಿಯೊಂದಿಗೆ ಹೊರತು, ಯಾವನೇ ವ್ಯಕ್ತಿಯು–

(ಕ) ಈ ಅಧಿನಿಯಮವು, ಪ್ರಾರಂಭವಾದ ತರುವಾಯು, ಕೊಳಚೆ ಪ್ರದೇಶದಲ್ಲಿನ ಯಾವುದೇ ಕಟ್ಟಡ ಅಥವಾ ಭೂಮಿಯಿಂದ, ಬಾಡಿಗೆದಾರರನ್ನು ಹೊರದೂಡುವುದಕ್ಕಾಗಿ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಪಡೆಯಲು ಯಾವುದೇ ದಾವೆ ಅಥವಾ ವ್ಯವಹರಣೆಗಳನ್ನು ಹೂಡತಕ್ಕದ್ದುಲ್ಲ; ಮತ್ತು

(ಖ) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂದೆ, ಅಂತಹ ಪ್ರದೇಶದಲ್ಲಿನ ಯಾವುದೇ ಕಟ್ಟಡ ಅಥವಾ ಭೂಮಿಯಿಂದ ಬಾಡಿಗೆದಾರರನ್ನು ಹೊರದೂಡುವುದಕ್ಕಾಗಿ ಹೂಡಲಾದ ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಪಡೆದಿರುವ ಸಂದರ್ಭದಲ್ಲಿ, ಅಂತಹ ಡಿಕ್ರಿ ಅಥವಾ ಆದೇಶವನ್ನು ಜಾರಿಗೊಳಿಸತಕ್ಕದ್ದುಲ್ಲ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅನುಮತಿಯನ್ನು ಪಡೆದುಕೊಳ್ಳಲಿಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಿದ ಪ್ರಾಧಿಕಾರಕ್ಕೆ ಬರಹದಲ್ಲಿ ನಿಯಮಿಸಬಹುದಾದಂತಹ ರೀತಿಯಲ್ಲಿ ಅಂತಹ ವಿಚಾರಣೆಗಳನ್ನೊಳಗೊಂಡಂತೆ, ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ನಿಯಮಿಸಿದ ಪ್ರಾಧಿಕಾರವು, ಪಕ್ಷಕಾರರಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಯೋಚಿಸುವಂಥ ವಿಚಾರಣೆಯನ್ನು ಪ್ರಕರಣದ, ಸನ್ನಿವೇಶಗಳ ಬಗ್ಗೆ ಮಾಡಿದ ತರುವಾಯ ಬರಹದಲ್ಲಿನ ಆದೇಶದ ಮೂಲಕ ಅಂಥ ಅನುಮತಿಯನ್ನು ಕೊಡಬಹುದು ಅಥವಾ ನಿರಾಕರಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಅನುಮತಿಯನ್ನು ಕೊಡುವಲ್ಲಿ ಅಥವಾ ಕೊಡಲು ನಿರಾಕರಿಸುವಲ್ಲಿ, ನಿಯಮಿಸಿದ ಪ್ರಾಧಿಕಾರ ಕೆಳಕಂಡ ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು ಎಂದರೆ:–

(ಕ) ಅವನನ್ನು ಹೊರದೂಡಲಾಗಿದ್ದರೆ ಬಾಡಿಗೆದಾರನ ಸಾಧನದೊಳಗೆ, ಪರ್ಯಾಯ ಸ್ಥಳಾವಕಾಶಾವು ಅವನಿಗೆ ಲಭ್ಯವಾಗಬಹುದೋ ಹೇಗೆ;

(ಖ) ಹೊರದೂಡುವಿಕೆಯ ಕೊಳಚೆ ಪ್ರದೇಶದ ಮೇಲ್ಪಾಟು ಮತ್ತು ನಿರ್ಮೂಲನೆಯ ಹಿತದೃಷ್ಟಿಯಲ್ಲಿರುವುದೋ ಹೇಗೆ;

(ಗ) ನಿಯಮಿಸಬಹುದಾದಂತಹ ಅಂಶಗಳು ಯಾವುದಾದರೂ ಇದ್ದರೆ, ಅವು.

(5) ನಿಯಮಿಸಿದ ಪ್ರಾಧಿಕಾರವು ಅನುಮತಿಯನ್ನು ಕೊಡಲು ನಿರಾಕರಿಸುವಲ್ಲಿ, ಅಂಥ ನಿರಾಕರಣೆಗಾಗಿನ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ದಾಖಲ ಮಾಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಅರ್ಜಿದಾರನಿಗೆ ಒದಗಿಸತಕ್ಕದ್ದು.

**29. ಅನುಮತಿಯನ್ನು ನಿರಾಕರಿಸುವ ಆದೇಶದ ವಿರುದ್ಧ ಅಪೀಲು:–** 5ನೇ ಪ್ರಕರಣದ (4)ನೇ ಉಪಪ್ರಕರಣದ ಅಥವಾ 28ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅನುಮತಿಯನ್ನು ಕೊಡಲು ನಿರಾಕರಿಸುವ ನಿಯಮಿಸಿದ ಪ್ರಾಧಿಕಾರವು ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ನಿಯಮಿಸಬಹುದಾದಂತಹ ಕಾಲದೊಳಗೆ, ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಸರ್ಕಾರವು ಅಪೀಲುದಾರನ ಚುನಾವಣೆಯ ತರುವಾಯ, ಅಂತಹ ಅಪೀಲನ್ನು ತೀರ್ಮಾನಿಸತಕ್ಕದ್ದು ಮತ್ತು ತೀರ್ಮಾನವು ಅಂತಿಮವಾಗಿರತಕ್ಕದ್ದು.

**30. ಬಾಡಿಗೆದಾರನು ಖಾಲಿ ಮಾಡಿದ ಆವರಣದ ಸ್ವಾಧೀನತೆಯನ್ನು ತಿರುಗಿ ಕೊಡುವುದು:–** (1) ಕೊಳಚೆ ಪ್ರದೇಶದ, ಯಾವುದೇ ಕಟ್ಟಡದ ಅಧಿಭೋಗದಲ್ಲಿರುವ ಬಾಡಿಗೆದಾರನು ಮೇಲ್ಪಾಟಿನ ಯಾವುದೇ ಕೆಲಸದ

ನಿರ್ವಹಣೆಯ ಉದ್ದೇಶಗಳಿಗಾಗಿ ಅಥವಾ ಕಟ್ಟಡದ ಪುನರ್ ನಿರ್ಮಾಣದ ಉದ್ದೇಶಕ್ಕಾಗಿ ಅದು ಅಗತ್ಯವಾಗಿದೆ ಎಂಬ ಕಾರಣದ ಮೇಲೆ ಆ ಯಾವುದೇ ಕಟ್ಟಡವನ್ನು ಖಾಲಿ ಮಾಡಿದಲ್ಲಿ ಅಥವಾ ಅಲ್ಲಿಂದ ಹೊರದೂಡಲಾದಲ್ಲಿ, ಬಾಡಿಗೆದಾರನು ನಿಯಮಿಸಬಹುದಾದಂಥ ಕಾಲದೊಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಸಂದರ್ಭಾನುಸಾರ ಮೇಲ್ಪಾಟಿನ ಕೆಲಸವು ಮುಕ್ತಾಯವಾದ ತರುವಾಯ ಅಥವಾ ಕಟ್ಟಡವನ್ನು ಪುನರ್ ನಿರ್ಮಿಸಿದ ತರುವಾಯ ಆ ಕಟ್ಟಡದ ಸ್ವಾಧೀನವನ್ನು ಪುನಃ ಪಡೆಯಲು ತಾನು ಇಚ್ಛಿಸುವುದಾಗಿ ಘೋಷಣೆಯನ್ನು ದಾಖಲ್ಮಾಡಬಹುದು.

(2) ಅಂಥ ಘೋಷಣೆಯನ್ನು ಸ್ವೀಕರಿಸಿದ ಮೇಲೆ ನಿಯಮಿಸಿದ ಪ್ರಾಧಿಕಾರವು ಆದೇಶದ ಮೂಲಕ ನಿಯಮಿಸಬಹುದಾದಂಥ ಕಾಲದೊಳಗೆ ಕಟ್ಟಡದ ಮೇಲ್ಪಾಟು ಪುನರ್ ನಿರ್ಮಾಣದ ಬಗೆಗಿನ ಕೆಲಸದ ನಕ್ಷೆಗಳನ್ನು ಮತ್ತು ಹಾಗೆ ಒದಗಿಸಿರುವ ಮತ್ತು ಅದರ ಖರ್ಚಿನ ಅಂದಾಜುಗಳನ್ನು ಮತ್ತು ಅವಶ್ಯವಾಗಬಹುದಾದಂಥ ಇತರ ವಿವರಗಳನ್ನು ಒದಗಿಸುವಂತೆ ಕಟ್ಟಡದ ಒಡೆಯನನ್ನು ಅಗತ್ಯಪಡಿಸತಕ್ಕದ್ದು ಮತ್ತು ಒದಗಿಸಿದ ಅಂಥ ನಕ್ಷೆಗಳು ಮತ್ತು ಅಂದಾಜುಗಳು ಮತ್ತು ವಿವರಗಳು ಯಾವುದಾದರೂ ಇದ್ದರೆ ಅವುಗಳ ಆಧಾರದ ಮೇಲೆ ಮತ್ತು 31ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳನ್ನು ಗಮನದಲ್ಲಿರಿಸಿ ಮತ್ತು ತಾನು ಸೂಕ್ತವೆಂದು ಯೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, (1)ನೇ ಉಪಪ್ರಕರಣದ ಮೇರೆಗೆ ಅವನು ಮಾಡಿದ ಘೋಷಣೆಯ ಅನುಸರಣೆಯಲ್ಲಿ, ಕಟ್ಟಡದ ಸ್ವಾಧೀನತೆಯನ್ನು ಅವನಿಗೆ ತಿರುಗಿ ಕೊಡಬಹುದಾದರೆ ಬಾಡಿಗೆದಾರನು ಸಂದಾಯ ಮಾಡಬೇಕಾದ ಬಾಡಿಗೆಯನ್ನು ತಾತ್ಕಾಲಿಕವಾಗಿ ನಿರ್ಧರಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ತಾತ್ಕಾಲಿಕವಾಗಿ ನಿರ್ಧರಿಸಿದ ಬಾಡಿಗೆಯನ್ನು ನಿಯಮಿಸಿದ ರೀತಿಯಲ್ಲಿ ಬಾಡಿಗೆದಾರ ಮತ್ತು ಒಡೆಯನಿಗೆ ತಿಳಿಸತಕ್ಕದ್ದು.

(4) ಬಾಡಿಗೆದಾರನು ಅಂಥ ತಿಳುವಳಿಕೆಯನ್ನು ಸ್ವೀಕರಿಸಿದ ತುವಾಯ (1)ನೇ ಉಪಪ್ರಕರಣದ ಮೇರೆಗೆ ಅವನು ಮಾಡಿದ ಘೋಷಣೆಯ ಅನುಸರಣೆಯಲ್ಲಿ ಕಟ್ಟಡ ಸ್ವಾಧೀನವನ್ನು ಅವನಿಗೆ ಪುನಃ ಕೊಟ್ಟಾಗ 31ನೇ ಪ್ರಕರಣದ ಮೇರೆಗೆ ಬಾಡಿಗೆಯನ್ನು ಅಂತಿಮವಾಗಿ ನಿರ್ಧರಿಸುವವರೆಗೆ, (2)ನೇ ಉಪಪ್ರಕರಣದ ಮೇರೆಗೆ ತಾತ್ಕಾಲಿಕವಾಗಿ ನಿರ್ಧರಿಸಿದ ಬಾಡಿಗೆಯನ್ನು ಒಡೆಯನಿಗೆ ಸಂದಾಯ ಮಾಡುತ್ತೇನೆಂದು ನಿಯಮಿಸಬಹುದಾದಂಥ ಕಾಲದೊಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಬರಹದಲ್ಲಿ ತಿಳಿಸಿದರೆ, ನಿಯಮಿಸಿದ ಪ್ರಾಧಿಕಾರವು ಬಾಡಿಗೆದಾರರನ್ನು ಸಂದರ್ಭಾನುಸಾರ ಕಟ್ಟಡದ ಮೇಲ್ಪಾಟು ಕೆಲಸ ಅಥವಾ ಪುನರ್ ನಿರ್ಮಾಣವು ಪೂರ್ಣಗೊಂಡ ತರುವಾಯ ಕಟ್ಟಡದ ಸ್ವಾಧೀನವನ್ನು ಬಾಡಿಗೆದಾರನಿಗೆ ಕೊಡಲು ಒಡೆಯನನ್ನು ನಿರ್ದೇಶಿಸತಕ್ಕದ್ದು ಮತ್ತು ಅಂಥ ನಿರ್ದೇಶನವನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**31. ಕೊಳಚೆ ಪ್ರದೇಶಗಳಲ್ಲಿಯ ಕಟ್ಟಡಗಳ ಬಾಡಿಗೆ:–** (1) ಕೊಳಚೆ ಪ್ರದೇಶದಲ್ಲಿರುವ ಯಾವುದೇ ಕಟ್ಟಡವನ್ನು ಮೇಲ್ಪಾಟಿನ ಯಾವುದೇ ಕೆಲಸವನ್ನು ನಿರ್ವಹಿಸಿದ ತರುವಾಯ ಅಥವಾ ಅದನ್ನು ಪುನರ್ ನಿರ್ಮಿಸಿದ ತರುವಾಯ ಬಾಡಿಗೆದಾರನಿಗೆ ಬಾಡಿಗೆ ಕೊಟ್ಟಲ್ಲಿ, ಕಟ್ಟಡದ ಬಾಡಿಗೆಯನ್ನು ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸತಕ್ಕದ್ದು.

(2) ಅಂಥ ಯಾವುದೇ ಕಟ್ಟಡವನ್ನು, 30ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ನಿರ್ದೇಶನದ ಅನುಸರಣೆಯಲ್ಲಿ ಕಟ್ಟಡದ ಸ್ವಾಧೀನದಲ್ಲಿರುವ ಬಾಡಿಗೆದಾರನನ್ನು ಹೊರತುಪಡಿಸಿ, ಇತರ ಬಾಡಿಗೆದಾರನಿಗೆ ಬಾಡಿಗೆ ಕೊಟ್ಟಿರುವಲ್ಲಿ ಬಾಡಿಗೆದಾರನು ಒಡೆಯನಿಗೆ–

(ಕ) ಕಟ್ಟಡವು ಇರುವಂಥ ಪ್ರದೇಶದಲ್ಲಿ ಜಾರಿಯಲ್ಲಿರುವ ಮತ್ತು ಆ ಕಟ್ಟಡಕ್ಕೆ ಅನ್ವಯಿಸುವ ಬಾಡಿಗೆಗಳ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಕಾನೂನು ಇದ್ದರೆ, ಆ ಕಾನೂನಿನ ಉಪಬಂಧಗಳಿಗನುಸಾರವಾಗಿ ನಿರ್ಧರಿಸಿದ ಅಥವಾ ಒಪ್ಪಿಕೊಂಡ ಬಾಡಿಗೆ, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು;

(ಎ) ಅಂಥ ಯಾವುದೇ ಕಾನೂನು ಅಂಥ ಪ್ರದೇಶಧಲ್ಲಿ ಜಾರಿಯಲ್ಲಿಲ್ಲದಿದ್ದರೆ ಒಡೆಯ ಮತ್ತು ಬಾಡಿಗೆದಾರನ ನಡುವೆ ಒಪ್ಪಬಹುದಾದಂಥ ಬಾಡಿಗೆಯನ್ನು ಒಡೆಯನಿಗೆ ಸಂದಾಯ ಮಾಡಲು ಬಾಡಿಗೆದಾರನು ಹೊಣೆಗಾರನಾಗಿರತಕ್ಕದ್ದು.

(3) ಅಂಥ ಯಾವುದೇ ಕಟ್ಟಡವನ್ನು 30ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅನುಸರಣೆಯಲ್ಲಿ ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿರುವಲ್ಲಿ, ಬಾಡಿಗೆದಾರನು, ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಬಾಡಿಗೆಗಳ ನಿಯಂತ್ರಣಕ್ಕೆ ಸಂಬಂಧಪಟ್ಟ ಯಾವುದೇ ಕಾನೂನಿನಲ್ಲಿ ಏನೇ ಇದ್ದಾಗ್ಯೂ.–

(ಕ) ಕಟ್ಟಡಕ್ಕೆ ಸಂಬಂಧಪಟ್ಟಂತೆ ಮೇಲ್ಪಾಟಿನ ಯಾವುದೇ ಕೆಲಸವನ್ನು ನಿರ್ವಹಿಸಿದ್ದರೆ, ಈ ಕೆಳಕಂಡ ಮೊಬಲಗುಗಳ ಒಟ್ಟು ಮೊತ್ತಕ್ಕೆ ಸಮನಾದ ಮೊತ್ತದ ವಾರ್ಷಿಕ ಬಾಡಿಗೆಯನ್ನು ಎಂದರೆ.–

(i) ಮೇಲ್ಪಾಟಿನ ಕೆಲಸದ ನಿರ್ವಹಣೆಯ ಕಟ್ಟಡವನ್ನು ಬಾಡಿಗೆದಾರನು ಖಾಲಿ ಮಾಡಿದ ನಿಕಟಪೂರ್ವದಲ್ಲಿ ಅವನು ಸಂದಾಯ ಮಾಡುತ್ತಿದ್ದ ವಾರ್ಷಿಕ ಬಾಡಿಗೆ;

(ii) ಮೇಲ್ಪಾಟಿನ ಕೆಲಸದ ಖರ್ಚಿನ ಆರರಷ್ಟು; ಮತ್ತು

(iii) ಅಂತಹ ಮೇಲ್ಪಾಟನ್ನು ಮಾಡುವ ಉದ್ದೇಶಕ್ಕಾಗಿ ಆರ್ಜಿಸಬಹುದಾದಂಥ ಯಾವುದೇ ಭೂಮಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಮೊಬಲಗಿಗೆ ಸಮನಾದ ಮೊತ್ತದ ಶೇಕಡಾ ಆರರಷ್ಟು;

(ಖ) ಕಟ್ಟಡವನ್ನು ಪುನಃ ನಿರ್ಮಿಸಲಾಗಿದ್ದರೆ, ಕಟ್ಟಡದ ಪುನರ್ ನಿರ್ಮಾಣ ಒಟ್ಟು ಖರ್ಚಿನ ಮತ್ತು ಕಟ್ಟಡವನ್ನು ಪುನರ್ ನಿರ್ಮಿಸಿದಂತಹ ಭೂಮಿಯ ಬೆಲೆಯು, ಶೇಕಡಾ ನಾಲ್ಕರಷ್ಟಕ್ಕೆ ಸಮನಾದ ಮೊತ್ತದ ವಾರ್ಷಿಕ ಬಾಡಿಗೆ ಇವುಗಳನ್ನು ಬಾಡಿಗೆದಾರನು ಒಡೆಯನಿಗೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

**ವಿವರಣೆ:–** ಈ ಖಂಡದ ಉದ್ದೇಶಕ್ಕಗಿ ಭೂಮಿಯ ಬೆಲೆಯನ್ನು ಈ ಅಧಿನಿಯಮದ ಮೇರೆಗೆ ಅದನ್ನು ಆರ್ಜಿಸಲಾಗಿದ್ದರೆ ಹೇಗೋ ಹಾಗೆ ಆ ಭೂಮಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಮೊಬಲಗಿಗೆ ಸಮನಾದ ಮೊತ್ತವೆಂಬುದಾಗಿ ಭಾವಿಸತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಯಾವುದೇ ಕಟ್ಟಡಕ್ಕೆ ಸಂಬಂಧಿಸಿದಂತೆ ಬಾಡಿಗೆದಾರನು ಸಂದಾಯ ಮಾಡಬೇಕಾದ ಬಾಡಿಗೆಯನ್ನು ಬಾಡಿಗೆದಾರ ಅಥವಾ ಒಡೆಯನು ಮಾಡಿಕೊಂಡ ಅರ್ಜಿಯ ಮೇಲೆ (5)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಾಧಿಕಾರವು ನಿರ್ಧರಿಸತಕ್ಕದ್ದು.

ಪರಂತು, ಬಾಡಿಗೆದಾರ ಅಥವಾ ಒಡೆಯನ ಅಂಥ ಬಾಡಿಗೆಯ ನಿರ್ಧರಣೆಗಾಗಿನ ಅರ್ಜಿಯನ್ನು ಅಂಥ ಪ್ರಾಧಿಕಾರವು ಸಾಕಷ್ಟು ಕಾರಣಗಳಿಗಾಗಿ ಅಲ್ಲದೇ, ಸಂದರ್ಭಾನುಸಾರ ಕಟ್ಟಡದ ಮೇಲ್ಪಾಟಿನ ಕೆಲಸವು ಅಥವಾ ಪುನರ್ ನಿರ್ಮಾಣ ಪೂರ್ಣಗೊಂಡ ದಿನಾಂಕದಿಂದ ತೊಂಭತ್ತು ದಿವಸಗಳು ಮುಕ್ತಾಯವಾದ ತರುವಾಯ ಪುರಸ್ಕರಿಸತಕ್ಕದ್ದಲ್ಲ.

(5) (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅರ್ಜಿಯನ್ನು ಯಾವ ಪ್ರಾಧಿಕಾರಕ್ಕೆ ಮಾಡಿಕೊಳ್ಳತಕ್ಕದ್ದೋ ಆ ಪ್ರಾಧಿಕಾರವಾಗಿರತಕ್ಕದ್ದು.–

(ಕ) ಆ ಕಟ್ಟಡವಿರುವಂಥ ಪ್ರದೇಶದಲ್ಲಿ ಜಾರಿಯಲ್ಲಿರುವ ಬಾಡಿಗೆಗಳ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಕಾನೂನು ಇರುವಲ್ಲಿ, ಆ ಪ್ರದೇಶದಲ್ಲಿರುವ ಕಟ್ಟಡಗಳ ಬಾಡಿಗೆಗಳನ್ನು ನಿಗದಿಪಡಿಸುವುದಕ್ಕಾಗಿ ಯಾವ ಪ್ರಾಧಿಕಾರಕ್ಕೆ ಅರ್ಜಿಯನ್ನು ಮಾಡಿಕೊಳ್ಳಬಹುದೋ ಆ ಪ್ರಾಧಿಕಾರ; ಮತ್ತು ಈ ಪ್ರಕರಣದ ಮೇರೆಗೆ ಬಾಡಿಗೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಸದರಿ ಸಾಮಾನ್ಯ ಕಾನೂನಿನ ಮೇರೆಗೆ ಅದು ಹೊಂದಿರುವ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಆ ಪ್ರಾಧಿಕಾರವು ಚಲಾಯಿಸಬಹುದು; ಮತ್ತು ಅಪೀಲುಗಳಿಗೆ ಸಂಬಂಧಪಟ್ಟ ಉಪಬಂಧಗಳನ್ನು ಒಳಗೊಂಡು ಅಂತಹ ಕಾನೂನಿನ ಉಪಬಂಧಗಳು, ತದನುಸಾರವಾಗಿ ಅನ್ವಯವಾಗತಕ್ಕದ್ದು;

(ಖ) ಆ ಪ್ರದೇಶದಲ್ಲಿ ಯಾವುದೇ ಅಂಥ ನಿರ್ದಿಷ್ಟ ಕಾನೂನು ಜಾರಿಯಲ್ಲಿಲ್ಲದಿದ್ದರೆ, ಸರ್ಕಾರವು ಆ ಬಗ್ಗೆ ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರವಾಗತಕ್ಕದ್ದು; ಮತ್ತು ಬಾಡಿಗೆಯನ್ನು ನಿರ್ಧರಿಸುವಲ್ಲಿ ಆ ಪ್ರಾಧಿಕಾರ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಹಾಗೂ ಅಂತಹ ಪ್ರಾಧಿಕಾರದ ತೀರ್ಮಾನಕ್ಕೆ ವಿರುದ್ಧವಾಗಿರುವ ಅಪೀಲುಗಳಿಗಾಗಿಯೂ ಸಹ ಅಂಥ ನಿಯಮಗಳು ಉಪಬಂಧಿಸಬಹುದು.

(6) ಈ ಪ್ರಕರಣದ ಮೇರೆಗೆ ಬಾಡಿಗೆಯನ್ನು ಅಂತಿಮವಾಗಿ ನಿರ್ಧರಿಸಿರುವಲ್ಲಿ, ಆಗ, ಬಾಡಿಗೆದಾರನು ಸಂದಾಯ ಮಾಡಿದ ಬಾಡಿಗೆ ಮೊಬಲಗನ್ನು ಹಾಗೆ ಅಂತಿಮವಾಗಿ ನಿರ್ಧರಿಸಿದ ಬಾಡಿಗೆಗೆ ಸರಿ ಹೊಂದಿಸತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ಮೊಬಲಗು ಅಂತಿಮವಾಗಿ ನಿರ್ಧರಿಸಿದ ಬಾಡಿಗೆಗಿಂತ ಕಡಿಮೆಯಾದರೆ ಅಥವಾ ಅದಕ್ಕಿಂತ ಹೆಚ್ಚಾದರೆ, ಸಂದರ್ಭಾನುಸಾರ ಬಾಡಿಗೆದಾರನು ಕೊರತೆಯಾದದ್ದನ್ನು ಸಂದಾಯ ಮಾಡತಕ್ಕದ್ದು ಅಥವಾ ಮರುಪಾವತಿಗೆ ಹಕ್ಕುಳ್ಳವನಾಗಿರತಕ್ಕದ್ದು.

**32. ಕೆಲವು ಕಟ್ಟಡಗಳ ಬಾಡಿಗೆದಾರರಿಗೆ ಈ ಅಧ್ಯಾಯವು ಅನ್ವಯವಾಗತಕ್ಕದ್ದಲ್ಲ:–** ಈ ಅಧ್ಯಾಯದಲ್ಲಿರುವ ಯಾವುದೇ ಕೊಳಚೆ ಪ್ರದೇಶದಲ್ಲಿರುವ ಹಾಗೂ ಸರ್ಕಾರಕ್ಕೆ ಅಥವಾ ಮಂಡಳಿಗೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿರುವ ಯಾವುದೇ ಕಟ್ಟಡದ ಬಾಡಿಗೆದಾರನಿಗೆ ಅಥವಾ ಅವನಿಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ–VIII

## ಮೈಸೂರು ಕೊಳಚೆ ನಿರ್ಮೂಲನಾ ಮಂಡಲಿ

**33. ಮೈಸೂರು ಕೊಳಚೆ ನಿರ್ಮೂಲನ ಮಂಡಲಿಯ ಸ್ಥಾಪನೆ:–** (1) ಸರ್ಕಾರವು ಈ ಬಗ್ಗೆ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಮೈಸೂರು ಕೊಳಚೆ ನಿರ್ಮೂಲನ ಮಂಡಲಿ ಎಂಬ ಹೆಸರಿನ ಮಂಡಲಿಯನ್ನು ಸ್ಥಾಪಿಸತಕ್ಕದ್ದು.

(2) ಮಂಡಲಿಯು ಹಿಂದೆ ಹೇಳಿದ ಹೆಸರನ್ನೊಳಗೊಂಡ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮುದ್ರೆಯನ್ನುಳ್ಳ ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಚರ ಮತ್ತು ಸ್ಥಿರಸ್ವತ್ತುಗಳೆರಡನ್ನು ಆರ್ಜಿಸುವ ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವುಳ್ಳ ನಿಯಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

**34. ಮಂಡಲಿಯ ರಚನೆ:–** (1) ಮಂಡಲಿಯು, ಒಬ್ಬ ಅಧ್ಯಕ್ಷ ಮತ್ತು ನಿಯಮಿಸಬಹುದಾದಂಥ ಹದಿನೈದಕ್ಕೆ ಮೀರದ ಅಂಥ ಇತರ ಸರ್ಕಾರಿ ಮತ್ತು ಸರ್ಕಾರೇತರ ಸದಸ್ಯರುಗನ್ನು ಒಳಗೊಂಡಿರತಕ್ಕದ್ದು.

(2) ಮಂಡಲಿಯ ಅಧ್ಯಕ್ಷ ಮತ್ತು ಇತರ ಸದಸ್ಯರನ್ನು ಸರ್ಕಾರವು ನೇಮಿಸತಕ್ಕುದು ಮತ್ತು ಸರ್ಕಾರದ ಇಷ್ಟಪರ್ಯಂತ ಅವರು ಪದಧಾರಣ ಮಾಡತಕ್ಕದ್ದು;

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಅಧ್ಯಕ್ಷ ಮತ್ತು ಇತರ ಸದಸ್ಯರುಗಳ ಪದಾವಧಿ ಮೂರು ವರ್ಷಗಳ ಅವಧಿಗಾಗಿ ಇರತಕ್ಕದ್ದು;

(4) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮಂಡಲಿಯ ಅಧ್ಯಕ್ಷ ಮತ್ತು ಇತರ ಸದಸ್ಯರುಗಳು ಈ ಪ್ರಕರಣದ ಮೇರೆಗೆ, ಅವರ ಉತ್ತರಾಧಿಕಾರಿಗಳನ್ನು ನೇಮಕ ಮಾಡುವವರೆಗೆ ಅವರ ಪದಾವಧಿ ಮುಗಿದ ನಂತರವೂ, ಮುಂದುವರಿಯತಕ್ಕದ್ದು.

**35. ಖಾಲಿಯಾದ ಸ್ಥಾನವು ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ:–** ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯು ಅಧ್ಯಕ್ಷನ ಅಥವಾ ಮಂಡಲಿಯ ಇತರ ಸದಸ್ಯರುಗಳಲ್ಲಿನ ಪದದಲ್ಲಿನ ಯಾವುದೆ ಖಾಲಿಸ್ಥಾನ ಇರುವ ಅಥವಾ ಅವರ ನೇಮಕದ ಯಾವುದೇ ನ್ಯೂನತೆಯ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**36. ಅಧ್ಯಕ್ಷ ಮತ್ತು ಇತರ ಸದಸ್ಯರುಗಳ ಸೇವಾ ಷರತ್ತುಗಳು:–** ಅಧ್ಯಕ್ಷ ಮತ್ತು ಇತರ ಸದಸ್ಯರುಗಳ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**37. ಅಧಿಕಾರಿಗಳ ಮತ್ತು ನೌಕರರ ನೇಮಕಾತಿ:–** (1) ಮಂಡಲಿಯ ಕಾರ್ಯದರ್ಶಿಯನ್ನು ಸರ್ಕಾರವು ನೇಮಕ ಮಾಡತಕ್ಕದ್ದು.

(2) ಕಾರ್ಯದರ್ಶಿಯು ಮಂಡಲಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗತಕ್ಕದ್ದು.

(3) ಮಂಡಲಿಯು ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ತಾನು ಅವಶ್ಯವೆಂದು ಪರ್ಯಾಲೋಚಿಸುವಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ನೇಮಕ ಮಾಡಬಹುದು.

**38. ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು:–** (1) ಮಂಡಲಿಯ ಅಧಿಕಾರಿಗಳು ಮತ್ತು ನೌಕರರ ವೇತನ ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(2) ರಾಜ್ಯ ಗೃಹನಿರ್ಮಾಣ ಮಂಡಲಿಯು ಯಾವುದೇ ಅಧಿಕಾರಿ ಅಥವಾ ನೌಕರರನ್ನು ಮಂಡಲಿಯಲ್ಲಿ ನೇಮಕ ಮಾಡಿದಲ್ಲಿ ಅವನ ಸೇವಾ ಷರತ್ತುಗಳು (ವೇತನ ಭವಿಷ್ಯನಿಧಿ, ಪಿಂಚಣಿ ಮತ್ತು ಉಪದಾನಗಳ ಬಗೆಗಿನ ಷರತ್ತುಗಳನ್ನೊಳಗೊಂಡು) ಸರ್ಕಾರವು ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟಿರತಕ್ಕದ್ದು.

**39. ಸದಸ್ಯರು, ಅಧಿಕಾರಿಗಳು ಮತ್ತು ನೌಕರರ ಸಾಮಾನ್ಯ ಅನರ್ಹತೆ:–** ಮಂಡಲಿಯಿಂದ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ತಾನಾಗಿ ಅಥವಾ ತನ್ನ ಪಾಲುದಾರ ಅಥವಾ ಏಜೆಂಟಿನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯು, ಮಂಡಲಿಯ ಸದಸ್ಯ ಅಥವಾ ಅಧಿಕಾರಿ ಅಥವಾ ನೌಕರನಾಗಿರತಕ್ಕದ್ದಲ್ಲ ಅಥವಾ ಉಳಿಯತಕ್ಕದ್ದಲ್ಲ.

**40. ಮಂಡಲಿಯ ಪ್ರಕಾರ್ಯಗಳು:–** ಸರ್ಕಾರವು,

(ಕ) ನಿಯಮಿತ ಪ್ರಾಧಿಕಾರದ ಅಧಿಕಾರಗಳನ್ನು ಮಂಡಲಿಯು ಚಲಾಯಿಸತಕ್ಕದ್ದೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸಿರುವಲ್ಲಿ ನಿಯಮಿತ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸುವುದು;

(ಖ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು ಆಗಿರತಕ್ಕದ್ದು.

**41. ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ:–** ಹಣಕಾಸು, ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟ 1962ರ ಕರ್ನಾಟಕ ಗೃಹನಿರ್ಮಾಣ ಮಂಡಲಿ ಅಧಿನಿಯಮದ (1963ರ ಕರ್ನಾಟಕ ಅಧಿನಿಯಮ 10) ಅಧ್ಯಾಯ ivರ ಉಪಬಂಧಗಳು ಸದರಿ ಉಪಬಂಧಗಳು ರಾಜ್ಯಗೃಹ ನಿರ್ಮಾಣ ಮಂಡಲಿಗೆ ಅನ್ವಯವಾಗಬಹುದಾದಷ್ಟರ ಮಟ್ಟಿಗೆ ಅನ್ವಯವಾಗತಕ್ಕದ್ದು.

**42. ಕೆಲವು ಸಂದರ್ಭಗಳಲ್ಲಿ ಯಾವುದೇ ಅನರ್ಹತೆ ಇರತಕ್ಕದಲ್ಲ:–** ಯಾವನೇ ವ್ಯಕ್ತಿಯು ಅವನು ಮಂಡಲಿಯ ಅಧ್ಯಕ್ಷ ಅಥವಾ ಸದನ್ಯನಾಗಿರುವನೆಂಬ ಕಾರಣ ಮಾತ್ರದಿಂದಲೇ ಕರ್ನಾಟಕ ವಿಧಾನಸಭೆ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗಿ ಆಯ್ಕೆ ಇರಲು ಅಥವಾ ಸದಸ್ಯನಾಗಿ ಆಯ್ಕೆ ಇರಲು ಅನರ್ಹನಾಗತಕ್ಕದ್ದಲ್ಲ.

**43. ವಿನಿಯಮಗಳನ್ನು ರಚಿಸಲು ಮಂಡಲಿಯ ಅಧಿಕಾರ:–** ಮಂಡಲಿಯು ಮಂಡಲಿಯ ಸಭೆಗಳು ಮತ್ತು ವ್ಯವಹಾರದ ನಡವಳಿಕೆಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸಬಹುದು.

**44. ಮಂಡಲಿಯು ಸರ್ಕಾರದ ನಿರ್ದೇಶನಗಳನ್ನು ಪಾಲಿಸತಕ್ಕದ್ದು:–** ಸರ್ಕಾರವು ಕಾಲಕಾಲಕ್ಕೆ ಸಾಮ್ಯಾನ್ಯವಾಗಿಯೇ ಆಗಲಿ ಅಥವಾ ಯಾವುದೇ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆಯೇ ಆಗಲಿ ಹೊರಡಿಸಬಹುದಾದಂಥ ಆದೇಶಗಳನ್ನು ಪಾಲಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

**45. ರಾಜ್ಯ ಗೃಹನಿರ್ಮಾಣ ಮಂಡಲಿಯ ಅಧಿಕಾರಗಳು ಕೊನೆಗೊಳ್ಳುವುದು:–** ಮಂಡಲಿಯನ್ನು ಸ್ಥಾಪಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದಲ್ಲಿ ವ್ಯವಹರಿಸಿದ ವಿಷಯಗಳಿಗೆ ಸಂಬಂಧಿಸಿದಮತೆ, 1962ರ ಕರ್ನಾಟಕ ಗೃಹ ನಿರ್ಮಾಣ ಮಂಡಲಿ ಅಧಿನಿಯಮ (1963ರ ಕರ್ನಾಟಕ ಅಧಿನಿಯಮ, 16) ಮೇರೆಗಿನ ಯಾವುದೇ ಪ್ರಕಾರ್ಯವನ್ನು ರಾಜ್ಯ ಗೃಹ ನಿರ್ಮಾಣ ಮಂಡಲಿಯು ಚಲಾಯಿಸುವುದು ಕೊನೆಗೊಳ್ಳತಕ್ಕದ್ದು.

**46. ಮಂಡಲಿಗೆ ರಾಜ್ಯ ಗೃಹನಿರ್ಮಾಣ ಮಂಡಲಿಯ ಕೆಲವು ಆಸ್ತಿಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ:–** (1) ರಾಜ್ಯ ಗೃಹ ನಿರ್ಮಾಣ ಮಂಡಲಿಯ ಎಲ್ಲಾ ಸ್ವತ್ತು, ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು, ಅಂಥ ಸ್ವತ್ತು, ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮಂಡಲಿಯನ್ನು ಸ್ಥಾಪಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ, ಕೊಳಚೆ ಪ್ರದೇಶದ ಮೇಲ್ಪಾಟು, ಕೊಳಚೆ ಪ್ರದೇಶದ ನಿರ್ಮೂಲನ ಮತ್ತು ಕೊಳಚೆ ನಿರ್ಮೂಲನ ಪ್ರದೇಶದ ಪುನರ್ ಅಭಿವೃದ್ಧಿಗೆ ಸಂಬಂಧಪಡುಷ್ಟರ ಮಟ್ಟಿಗೆ, ಮಂಡಲಿಗೆ ವರ್ಗಾಯಿತವಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(2) (ಕ) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತು, ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮಂಡಲಿಗೆ ವರ್ಗಾಯಿತವಾಗಿದೆಯೇ ಮತ್ತು ನಿಹಿತವಾಗಿದೆಯೇ ಎಂಬುದರ ಬಗ್ಗೆ ಯಾವುದೇ ವಿವಾದವು ಉದ್ಭವಿಸಿದರೆ ಆ ವಿವಾದವನ್ನು ಸರ್ಕಾರದ ತೀರ್ಮಾನಕ್ಕೆ ಒಪ್ಪಿಸತಕ್ಕದ್ದು ಮತ್ತು ಅದರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(ಖ) ಅಂಥ ಯಾವುದೇ ವಿವಾದದ ಮೇಲೆ ಯಾವುದೇ ತೀರ್ಮಾನವನ್ನು ಕೊಡುವುದಕ್ಕೆ ಮುಂಚೆ ಸರ್ಕಾರವು ರಾಜ್ಯ ಗೃಹ ಮಂಡಲಿ ಮತ್ತು ಮಂಡಲಿಗೆ ಮನವಿ ಮಾಡಿಕೊಳ್ಳಲು ಅವಕಾಶವನ್ನು ಕೊಡತಕ್ಕದ್ದು.

**47. ಕೆಲವು ಕರಾರುಗಳು ಮತ್ತು ಒಪ್ಪಂದಗಳನ್ನು ಮಂಡಲಿಯು ಜಾರಿಗೊಳಿಸತಕ್ಕದ್ದು.–** (1) ಮಂಡಲಿಯನ್ನು ಸ್ಥಾಪಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಅಥವಾ ಪರಿಣಾಮಕಾರಿಯಾಗಿರುವ ಮತ್ತು ರಾಜ್ಯ ಗೃಹ ನಿರ್ಮಾಣ ಮಂಡಲಿಯ ಪಕ್ಷಕಾರನಾಗಿರುವಂಥ ಎಲ್ಲ ಕರಾರುಗಳು, ಒಪ್ಪಂದಗಳು ಮತ್ತು ಯಾವುದೇ ಸ್ವರೂಪದ ಲಿಖಿತಗಳು ಅಂಥ ಕರಾರುಗಳು ಒಪ್ಪಂದಗಳು ಮತ್ತು ಲಿಖಿತಗಲು ಕೊಳಚೆ ಪ್ರದೇಶದ ಮೇಲ್ಪಾಟು, ಕೊಳಚೆ ಪ್ರದೇಶದ ನಿರ್ಮೂಲನ ಮತ್ತು ಕೊಳಚೆ ನಿರ್ಮೂಲನ ಪ್ರದೇಶದ ಪುನರ್ ಅಭಿವೃದ್ಧಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಮಂಡಲಿಯ ವಿರುದ್ಧ ಅಥವಾ ಅದರ ಪರಿವಾಗಿ ಸಂಪೂರ್ಣ ಜಾರಿಯಲ್ಲಿರತಕ್ಕದ್ದು ಮತ್ತು ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ರಾಜ್ಯ ಗೃಹ ನಿರ್ಮಾಣ ಮಂಡಲಿಗೆ ಬದಲಾಗಿ ಮಂಡಲಿಯು ಅದಕ್ಕೆ ಪಕ್ಷಕಾರನಾಗಿದ್ದಿದ್ದರೆ, ಹೇಗೋ ಹಾಗೆ ಅಥವಾ ಅವುಗಳನ್ನು ಮಂಡಲಿಯ ಪರವಾಗಿ ಮಾಡಿಕೊಂಡಿದ್ದರೆ, ಹೊರಡಿಸಿದ್ದರೆ, ಹೇಗೋ ಹಾಗೆ ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು ಅಥವಾ ಅವುಗಳ ಮೇರೆಗೆ ಕಾರ್ಯ ನಿರ್ವಹಿಸಬಹುದು.

(2) ಮಂಡಲಿಯನ್ನು ಸ್ಥಾಪಿಸಿದ ದಿನಾಂಕದಂದು, ರಾಜ್ಯ ಗೃಹ ನಿರ್ಮಾಣ ಮಂಡಲಿಯಿಂದ ಅಥವಾ ಅದಕ್ಕೆ ವಿರುದ್ಧವಾದ ಯಾವುದೇ ದಾವೆ, ಅಪೀಲು ಅಥವಾ ಯಾವುದೇ, ಸ್ವರೂಪದ ಇತರ ಕಾನೂನು ವ್ಯವಹರಣೆಯ ಇತ್ಯರ್ಥದಲ್ಲಿ ಇದ್ದರೆ, ಆಗ ಅಂಥ ದಾವೆ, ಅಪೀಲು ಅಥವಾ ಇತರ ಕಾನೂನು ವ್ಯವಹರಣೆಯು ಕೊಳಚೆ ನಿರ್ಮೂಲನಾ ಪ್ರದೇಶದ ಮತ್ತು ಕೊಳಚೆ ನಿರ್ಮೂಲನ ಪುನರ್ ಅಭಿವೃದ್ಧಿಗೆ ಸಂಬಂಧಪಡುವಷ್ಟರ ಮಟ್ಟಿಗೆ ರಾಜ್ಯ ಗೃಹ ನಿರ್ಮಾಣ ಮಂಡಲಿಯ ಆ ಸ್ವತ್ತು, ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮಂಡಲಿಗೆ ವರ್ಗಾಯಿಸಿದ ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಕಾರ್ಯದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ, ಮುಂದುವರೆಸದೆ ಇರತಕ್ಕದ್ದಲ್ಲ ಅಥವಾ ಯಾವುದೇ ಮೇರೆಗೆ ಮಾಡಿದ ಯಾವುದೇ ರೀತಿಯಲ್ಲಿ ಪ್ರತಿಕೂಲವಾಗಿ ಪರಿಣಾಮ ಬೀರತಕ್ಕದ್ದಲ್ಲ ಆದರೆ ಆ ದಾವೆ, ಅಪೀಲು ಅಥವಾ ಇತರ ಕಾನೂನು ವ್ಯವಹರಣೆಯನ್ನು ಮಂಡಲಿಯು ಅಥವಾ ಅದರ ವಿರುದ್ಧ ಮುಂದುವರಿಸಬಹುದು, ನಡೆಸಬಹುದು ಮತ್ತು ಜಾರಿಗೊಳಿಸಬಹುದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಕ್ಕಾಗಿ, "ಕಾನುನು ವ್ಯವಹರಣೆ"ಯು 1894ರ ಭೂ ಅರ್ಜನಾ ಅಧಿನಿಯಮ (1894 ಕೇಂದ್ರ ಅಧಿನಿಯಮ 1)ದ ಮೇರೆಗಿನ ಯಾವುದೇ ವ್ಯವಹರಣೆಯನ್ನು ಒಳಗೊಳ್ಳುತ್ತದೆ.

**48. ರಾಜ್ಯ ಗೃಹ ನಿರ್ಮಾಣ ಮಂಡಲಿಯಿಂದ, ಮಂಡಲಿಗೆ ನಿರ್ದಿಷ್ಟ ಮೊಬಲಗಿನ ಸಂದಾಯ:–** 45ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ರಾಜ್ಯ ಗೃಹ ನಿರ್ಮಾಣ ಮಂಡಲಿಯು, ಮಂಡಲಿಯನ್ನು ಸ್ಥಾಪಿಸಿದ ದಿನಾಂಕದಂದು ಇದ್ದಂತೆ ಅದರ ನಿಧಿಗಳಿಂದ ಸರ್ಕಾರವು ರಾಜ್ಯ ಗೃಹನಿರ್ಮಾಣ ಮಂಡಲಿಯೊಂದಿಗೆ ಸಮಾಲೋಚಿಸಿ, ನಿರ್ದಿಷ್ಟಪಡಿಸಬುದಾದಂಥ ಮೊಬಲಗನ್ನು ಮಂಡಲಿಗೆ ಸಂದಾಯ ಮಾಡತಕ್ಕದ್ದು.

## ಅಧ್ಯಾಯ–IX

## ಸಂಕೀರ್ಣ

**49. ನಿಯಮಿಸಿದ ಪ್ರಾಧಿಕಾರದ ಅಧಿಕಾರಗಳನ್ನು ಮಂಡಲಿಯು ಚಲಾಯಿಸತಕ್ಕದ್ದು:–** ಈ ಅಧಿನಿಯಮದ ಮೇರೆಗೆ ನಿಯಮಿಸಿದ ಪ್ರಾಧಿಕಾರವು ಚಲಾಯಿಸಬುದಾದ ಯಾವುದೇ ಅಧಿಕಾರವನ್ನು ಸರ್ಕಾರವು ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಕರಣಗಳಲ್ಲಿ ಅಂಥ ಮತ್ತು ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಮಂಡಲಿಯು ಚಲಾಯಿಸಬಹುದೆಂದು

ನಿರ್ದೇಶಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಿಸಿದ ಪ್ರಾಧಿಕಾರವು ಆ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

**50. ನೋಟೀಸುಗಳ ಮತ್ತು ಆದೇಶಗಳ ಜಾರಿ:–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು ಮತ್ತು ಈ ಪ್ರಕರಣದ ಉಪಬಂಧಗಳು ಮತ್ತು ಈ ಬಗ್ಗೆ ರಚಿಸಿದ ಯಾವುದೇ ನಿಯಮಾವಳಿಗೊಳಪಟ್ಟು, ಈ ಅಧಿನಿಯಮ ಮೇರೆಗೆ ಹೊರಡಿಸಿದ ಪ್ರತಿಯೊಂದು ನೋಟೀಸು ಅಥವಾ ಮಾಡಿದ ಆದೇಶವನ್ನು–

(ಕ) ಸಾಮಾನ್ಯ ಸ್ವರೂಪದ ಅಥವಾ ವ್ಯಕ್ತಿಗಳ ವರ್ಗಕ್ಕೆ ಬಾಧಕವಾಗುವಂಥ ಯಾವುದೇ ನೋಟೀಸು ಅಥವಾ ಆದೇಶದ ಸಂದರ್ಭದಲ್ಲಿ, ಅದನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು;

(ಖ) ಯಾವನೇ ವ್ಯಕ್ತಿ, ನಿಗಮ ಅಥವಾ ಫರ್ಮಿಗೆ ಬಾಧಕವನ್ನುಂಟು ಮಾಡುವ ಯಾವುದೇ ನೋಟೀಸು ಅಥವಾ ಆದೇಶದ ಸಂದರ್ಭದಲ್ಲಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಿಯಮ Vರ) ಮೊದಲನೇ ಅನುಸೂಚಿಯಲ್ಲಿ XXIX ಸಂದರ್ಭಾನುಸಾರ ಕ್ರಮಾದೇಶದ 2ನೇ ನಿಯಮದಲ್ಲಿ ಅಥವಾ XXX ಕ್ರಮಾದೇಶದ 3ನೇ ನಿಯಮದಲ್ಲಿ ಸಮನುಗಳನ್ನು ಜಾರಿಗೊಳಿಸುವುದಕ್ಕಾಗಿ ಉಪಬಂಧಿಸಿದ ರೀತಿಯಲ್ಲಿ ಜಾರಿ ಮಾಡತಕ್ಕದ್ದು; ಮತ್ತು

(ಗ) ಯಾವನೇ ಒಬ್ಬ ವ್ಯಕ್ತಿಗೆ (ನಿಗಮ ಅಥವಾ ಫರ್ಮು ಅಲ್ಲದ) ಬಾಧಕವನ್ನುಂಟು ಮಾಡುವ ಯಾವುದೇ ನೋಟೀಸು ಅಥವಾ ಆದೇಶದ ಸಂದರ್ಭದಲ್ಲಿ, ಅಂಥ ವ್ಯಕ್ತಿಗೆ,–

(i) ಆ ವ್ಯಕ್ತಿಗೆ ಅದನ್ನು ವಶಾವಣೆ ಕೊಡಮಾಡುವ ಮೂಲಕ, ಅಥವಾ

(ii) ಅದನ್ನು ಹಾಗೆ ವಶಾವಣೆ ಅಥವಾ ಕೊಡಮಾಡಲು ಆಗದಿದ್ದರೆ ಅಂಥ ವ್ಯಕ್ತಿಯು, ನಿಯೋಜಿತನಾಗಿರುವಂತಹ ಕಛೇರಿಯ ಮುಖ್ಯಸ್ಥನಿಗೆ ಅಥವಾ ಅಂಥ ವ್ಯಕ್ತಿಯ ಯಾವನೇ ವಯಸ್ಕ ಪುರುಷ ನೌಕರನಿಗೆ ಅಥವಾ ಅಂತಹ ವ್ಯಕ್ತಿಯ ಕುಟುಂಬದ ಯಾವನೇ ವಯಸ್ಕ ಪುರುಷ ಸದಸ್ಯನಿಗೆ ವಶಾವಣೆ ಅಥವಾ ಕೊಡಮಾಡುವ ಮೂಲಕ ಅಥವಾ ಆ ವ್ಯಕ್ತಿಯು ಕೊನೆಯ ಸಲ ವಾಸಿಸುತ್ತಿದ್ದನೆಂದು, ಅಥವಾ ವ್ಯವಹಾರವನ್ನು ನಡೆಸುತ್ತಿದ್ದ ಅಥವಾ ಗಳಿಕೆಗಾಗಿ ಸ್ವತಃ ಕೆಲಸ ಮಾಡುತ್ತಿದ್ದನೆಂದು ತಿಳಿದುಬಂದಂತಹ ಆವರಣದ ಹೊರ ಬಾಗಿಲಿನ ಮೇಲೆ ಅಥವಾ ಅದರ ಯಾವುದೇ ಎದ್ದುಕಾಣುವ ಭಾಗದ ಮೇಲೆ ಅದರ ಪ್ರತಿಯನ್ನು ಅಂಟಿಸುವುದರ ಮೂಲಕ ಅಥವಾ

(iii) ಮೇಲೆ ಹೇಳಿದ ಯಾವುದೇ ರೀತಿಯ ಮೂಲಕ ಜಾರಿಗೊಳಿಸಲು ಆಗದಿದ್ದಲ್ಲಿ ಅಂಚೆಯ ಮೂಲಕ ಅಥವಾ ಸದರಿ ನೋಟೀಸು ಅಥವಾ ಆದೇಶದ ಪ್ರತಿಯನ್ನು ಅದಕ್ಕೆ ಸಂಬಂಧಪಟ್ಟಂಥ ಭೂಮಿ ಅಥವಾ ಕಟ್ಟಡದ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವುದರ ಮೂಲಕ

–ಜಾರಿಗೊಳಿಸತಕ್ಕದ್ದು.

(2) ಆ ಭೂಮಿ ಅಥವಾ ಕಟ್ಟಡದ ಒಡೆತನದ ಬಗ್ಗೆ ಯಾವುದೇ ವಿವಾದದ ಕಾರಣದಿಂದ ಅಥವಾ ಯಾರಿಗೆ ಆ ನೋಟೀಸು ಅಥವಾ ಆದೇಶವು ಉದ್ದೇಶಿತವಾಗಿದೆಯೋ ಆ ವ್ಯಕ್ತಿಯನ್ನು ಸುಲಭವಾಗಿ ಪತ್ತೆ ಹಚ್ಚಲು ಆಗದ ಕಾರಣದಿಂದ ಅನುಚಿತ ವಿಳಂಬವಲ್ಲದೇ ನೋಟೀಸು ಅಥವಾ ಆದೇಶವನ್ನು ಜಾರಿ ಮಾಡಲು ಆಗದೆ ಇರುವಲ್ಲಿ, ನೋಟೀಸು ಅಥವಾ ಆದೇಶ ಪತ್ರವನ್ನು, ಅದನ್ನು ಸರ್ಕಾರಿ ರಾಜಪತ್ರದಲ್ಲಿ

ಪ್ರಕಟಿಸುವ ಮೂಲಕ ಮತ್ತು ಸಾಧ್ಯವಿರುವಲ್ಲಿ ಅದರ ಪ್ರತಿಯನ್ನು ಅದಕ್ಕೆ ಸಂಬಂಧಪಟ್ಟಂತಹ ಭೂಮಿ ಅಥವಾ ಕಟ್ಟಡದ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವ ಮೂಲಕ ಜಾರಿ ಮಾಡಬಹುದು.

**51. ಪ್ರವೇಶಾಧಿಕಾರಿಗಳು:–** ಈ ಬಗ್ಗೆ ನಿಯಮಿಸಿದ ಪ್ರಾಧಿಕಾರದಿಂದ ಅಧಿಕೃತನಾದ ಯಾವನೇ ವ್ಯಕ್ತಿಗೆ, ಯಾವುದೇ ವಿಚಾರಣೆ, ಪರಿಶೀಲನೆ, ಅಳತೆ, ಮೌಲ್ಯಮಾಪನ ಅಥವಾ ಮೋಜಣೆ ಮಾಡುವುದಕ್ಕಾಗಿ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಯಾವುದೇ ಉಪಬಂಧದ ಯಾವುದೇ ಉದ್ದೇಶಕ್ಕಾಗಿ ಅಥವಾ ಅದರ ಅನುಸರಣೆಯಲ್ಲಿ ನಿರ್ವಹಿಸಲು ಅವಶ್ಯವಾದಂತಹ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಸಹಾಯಕರು ಅಥವಾ ಕೆಲಸಗಾರರೊಂದಿಗೆ ಅವಶ್ಯವಾದಂತಹ ಅಥವಾ ಅವರಿಲ್ಲದೆ, ಯಾವುದೇ ಕೊಳಚೆ ಪ್ರದೇಶದಲ್ಲಿ ಅಥವಾ ಕೊಳಚೆ ನಿರ್ಮೂಲನ ಪ್ರದೇಶದಲ್ಲಿ ಯಾವುದೇ ಭೂಮಿ ಅಥವಾ ಕಟ್ಟಡದ ಒಳಕ್ಕೆ ಅಥವಾ ಅದರ ಮೇಲೆ ಪ್ರವೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

**52. ಪರಿಶೀಲನಾ ಅಧಿಕಾರ:–** (1) ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಯಾವನೇ ವ್ಯಕ್ತಿಯನ್ನು.–

(ಕ) ಕೊಳಚೆ ಪ್ರದೇಶದಲ್ಲಿ ಅಥವಾ ಕೊಳಚೆ ನಿರ್ಮೂಲನಾ ಪ್ರದೇಶದಲ್ಲಿ ಯಾವುದೇ ಚರಂಡಿ, ಕಕ್ಕಸು, ಮೂತ್ರಿ, ರೊಚ್ಚುಗುಂಡಿ, ಕೊಳವೆ, ಗ್ರಾಮಸಾರ ಚರಂಡಿ ಅಥವಾ ಕಾಲುವೆ ಯಾವುದೇ ಭೂಮಿ ಅಥವಾ ಕಟ್ಟಡವನ್ನು ಪರಿಶೀಲಿಸಲು ಮತ್ತು ತನ್ನ ವಿವೇಚನೆಯಲ್ಲಿ ಸಂದರ್ಭಾನುಸಾರ ಚರಂಡಿ, ಕಕ್ಕಸು, ಮೂತ್ರಿ, ರೊಚ್ಚುಗುಂಡಿ, ಕೊಳವೆ, ಗ್ರಾಮಸಾರ ಚರಂಡಿ ಅಥವಾ ಕಾಲುವೆ–ಇವುಗಳಿಂದ ಉಂಟಾಗುವ ಯಾವುದೇ ಉಪದ್ರವವನ್ನು ತಡೆಗಟ್ಟುವ ಅಥವಾ ನಿವಾರಿಸುವ ಉದ್ದೇಶಕ್ಕಾಗಿ ನೆಲವನ್ನು ಅಗೆಯುವಂತೆ ಮಾಡಲು;

(ಖ) ಕೊಳಚೆ ಪ್ರದೇಶದಲ್ಲಿ ನಿರ್ಮಾಣದಲ್ಲಿರುವ ಕಾಮಗಾರಿಗಳನ್ನು ಪರೀಕ್ಷಿಸಲು ಅಥವಾ ಮಟ್ಟಗಳನ್ನು ತೆಗೆದುಕೊಳ್ಳಲು ಅಥವಾ ಯಾವುದೇ ಮೀಟರನ್ನು ತೆಗೆದುಹಾಕಲು, ಸೂಕ್ಷ್ಮವಾಗಿ ಪರೀಕ್ಷಿಸಲು, ಬದಲಾಯಿಸಲು ಓದಲು–ಅಧಿಕೃತಗೊಳಿಸಬಹುದು.

(2) ಅಂಥ ಪರಿಶೀಲನೆಯನ್ನು ಮಾಡಿದ ಮೇಲೆ ಉಪದ್ರವನ್ನು ತಡೆಗಟ್ಟುವುದಕ್ಕಾಗಿ ಅಥವಾ ನಿವಾರಿಸುವುದಕ್ಕಾಗಿ ನೆಲವನ್ನು ಅಗೆಯುವುದು ಅವಶ್ಯವೆಂದು ಕಂಡುಬಂದರೆ, ಆ ಮೂಲಕ ವಹಿಸಿದ ವೆಚ್ಚಗಳನ್ನು, ಭೂಮಿ ಅಥವಾ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನು ಸಂದಾಯ ಮಾಡತಕ್ಕದ್ದು ಆದರೆ, ಯಾವುದೇ ಉಪದ್ರವವಿಲ್ಲವೆಂದು ಅಥವಾ ಅಂಥ ಅಗೆಯುವಿಕೆಯು ಮಾಡದಿದ್ದರೆ ಅದು ಉಂಟಾಗುತ್ತಿತ್ತೆಂದು ಕಂಡು ಬಂದರೆ, ಅಂಥ ಪರಿಶೀಲನೆಯ ಉದ್ದೇಶಕ್ಕಾಗಿ ಅಗೆದ, ಹಾನಿಗೊಳಗಾದ ಅಥವಾ ತೆಗೆದು ಹಾಕಿದ ನೆಲ ಅಥವಾ ಯಾವುದೇ ಕಟ್ಟಡದ ಭಾಗ, ಚರಂಡಿ ಅಥವಾ ಇತರ ಕೆಲಸವನ್ನು ಸರ್ಕಾರವು ಸಂದರ್ಭಾನುಸಾರ ಭರ್ತಿ ಮಾಡತಕ್ಕದ್ದು, ಪುನಃ ಸ್ಥಾಪಿಸತಕ್ಕದ್ದು ಅಥವಾ ಸರಿಪಡಿಸತಕ್ಕದ್ದು.

**53. ಕಾಮಗಾರಿಯು ನಡೆಯುತ್ತಿರುವ ಭೂಮಿಗೆ ಹೊಂದಿಕೊಂಡಿರುವ ಭೂಮಿಯನ್ನು ಪ್ರವೇಶಿಸಲು ಅಧಿಕಾರ:–** ಈ ಬಗ್ಗೆ ಸರ್ಕಾರದಿಂದ ಅಧಿಕೃತನಾದ ಯಾವನೇ ವ್ಯಕ್ತಿಯು ಸಹಾಯಕರು ಅಥವಾ ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತವಾದ ಯಾವುದೇ ಕಾಮಗಾರಿಯಿಂದ ನಲ್ವತ್ತೈದು ಮೀಟರುಗಳೊಳಗಿನ ಯಾವುದೇ ಭೂಮಿಯ ಮೇಲೆ, ಅದರ ಮೇಲೆ ಯಾವುದೇ ಮಣ್ಣು, ಕಂಕರು, ಕಲ್ಲು ಅಥವಾ ಇತರ ಸಾಮಗ್ರಿಗಳನ್ನು ಹಾಕುವ ಉದ್ದೇಶಕ್ಕಾಗಿ ಅಥವಾ ಅಂಥ ಕಾಮಗಾರಿಗೆ ಪ್ರವೇಶಾವಕಾಶ ಪಡೆಯುವುದಕ್ಕಾಗಿ ಅಥವಾ ಅದನ್ನು ನಿರ್ವಹಿಸುವುದಕ್ಕೆ ಸಂಬಂಧಪಟ್ಟ ಇತರ ಯಾವುದೇ ಉದ್ದೇಶಕ್ಕಾಗಿ ಪ್ರವೇಶಿಸಬಹುದು.

(2) ಹಾಗೆ ಅಧಿಕೃತನಾದ ವ್ಯಕ್ತಿಯು (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಪ್ರವೇಶಿಸುವುದಕ್ಕೆ ಮುಂದೆ, ಅದರ ಉದ್ದೇಶವನ್ನು ತಿಳಿಸತಕ್ಕದ್ದು ಮತ್ತು ಅಧಿಭೋಗದಾರ ಅಥವಾ ಒಡೆಯನು ಹಾಗೆ ಅಗತ್ಯಪಡಿಸಿದರೆ, ಅಂಥ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಷ್ಟು ಭೂಮಿಗೆ ಬೇಲಿಯನ್ನು ಹಾಕತಕ್ಕದ್ದು.

(3) ಹಾಗೆ ಪ್ರಾಧಿಕೃತನಾದ ವ್ಯಕ್ತಿಯು, ಈ ಪ್ರಕರಣದ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ, ಆದಷ್ಟು ಹಾನಿ ಉಂಟಾಗದಂತೆ ಮಾಡತಕ್ಕದ್ದು ಮತ್ತು ಅಂಥ ಭೂಮಿಯ ಒಡೆಯ ಅಥವಾ ಅಧಿಭೋಗದಾರನಿಗೆ ಅಥವಾ ಅವರಿಬ್ಬರಿಗೂ ಅಂತಹ ಯಾವುದೇ ಹಾನಿಯು ಖಾಯಂ ಆದುದೇ ಆಗಿರಲು ಅಥವಾ ತಾತ್ಕಾಲಿಕವಾದುದ್ದಾಗಿರಲಿ ಅದಕ್ಕಾಗಿ ರಚಿಸಬಹುದಾದಂಥ ನಿಯಮಗಳಿಗನುಸಾರವಾಗಿ ಸರ್ಕಾರವು, ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**54. ಕಟ್ಟಡದೊಳಗೆ ಪ್ರವೇಶಿಸಲು ಅಧಿಕಾರ.–** ಈ ಬಗ್ಗೆ ನಿಯಮಿಸಿದ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿ,–

(ಕ) ಇಂಥ ಪ್ರವೇಶದ ಉದ್ದೇಶಕ್ಕಾಗಿ ಅದನ್ನು ತೆರೆಯುವುದು ಅವಶ್ಯವೆಂದು ಅವನು ಪರ್ಯಾಲೋಚಿಸಿದರೆ;

(ಖ) ಒಡೆಯ ಅಥವಾ ಅಧಿಭೋಗದಾರನು ಇಲ್ಲದಿದ್ದರೆ ಅಥವಾ ಇದ್ದು ಅಂಥ ಬಾಗಿಲನ್ನು, ಗೇಟನ್ನು ಅಥವಾ ಅಡ್ಡಗಟ್ಟನ್ನು ತೆರೆಯಲು ನಿರಾಕರಿಸಿದರೆ–ಯಾವುದೇ ಸ್ಥಳದೊಳಕ್ಕೆ ಪ್ರವೇಶಿಸಲು ಅಥವಾ ಯಾವುದೇ ಬಾಗಿಲು, ಗೇಟು ಅಥವಾ ಇತರ ಅಡ್ಡಗಟ್ಟನ್ನು ತೆರೆಯುವುದು ಅಥವಾ ತೆರೆಯುವಂತೆ ಮಾಡುವುದು ಕಾನೂನು ಸಮ್ಮತವಾಗಿರತಕ್ಕದ್ದು.

**55. ಹಗಲು ಹೊತ್ತಿನಲ್ಲಿ ಪ್ರವೇಶವನ್ನು ಮಾಡುವುದು:–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತವಾದ ಯಾವುದೇ ಪ್ರವೇಶವನ್ನು ಸೂರ್ಯೋದಯ ಮತ್ತು ಸೂರ್ಯಾಸ್ತಗಳ ನಡುವಿನ ವೇಳೆಯಲ್ಲಿಲ್ಲದೆ ಮಾಡತಕ್ಕದ್ದಲ್ಲ.

**56. ಹಗಲು ಹೊತ್ತಿನಲ್ಲಿ ಪ್ರವೇಶವನ್ನು ಮಾಡುವುದು:–** ಅಧಿನಿಯಮದಲ್ಲಿ ಉಪಬಂಧಿಸಿದಂತೆ ಹೊರತು, ಅಧಿಭೋಗದಾರನ ಅಥವಾ ಅಧಿಭೋಗದಾರನಿಲ್ಲದಿದ್ದರೆ ಅದರ ಒಡೆಯನ ಸಮ್ಮತಿಯಿಲ್ಲದೆ, ಯಾವುದೇ ಭೂಮಿ ಅಥವಾ ಕಟ್ಟಡವನ್ನು ಪ್ರವೇಶಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಪ್ರವೇಶವನ್ನು ಸಂದರ್ಭಾನುಸಾರ ಸದರಿ ಅಧಿಭೋಗದಾರ ಅಥವಾ ಒಡೆಯನಿಗೆ, ಅಂಥ ಪ್ರವೇಶವನ್ನು ಮಾಡುವ ಉದ್ದೇಶದ ಬಗ್ಗೆ ಇಪ್ಪತ್ನಾಲ್ಕು ಗಂಟೆಗಳಿಗಿಂತ ಕಡಿಮೆಯಿಲ್ಲದ ಬರಹದಲ್ಲಿನ ನೋಟೀಸನ್ನು ಕೊಡದೆಯೇ ಮಾಡತಕ್ಕದ್ದಲ್ಲ;

ಪರಂತು, ಪರಿಶೀಲಿಸಬೇಕಾಗಿರುವ ಸ್ಥಳವು, ದನದ ಕೊಟ್ಟಿಗೆ ಅಥವಾ ಕಕ್ಕಸು, ಮೂತ್ರಿ ಅಥವಾ ನಿರ್ಮಾಣದಲ್ಲಿರುವ ಕಾಮಗಾರಿಯಾಗಿದ್ದರೆ ಯಾವುದೇ ಅಂಥ ನೋಟೀಸು ಅವಶ್ಯವಿರತಕ್ಕುದಲ್ಲ.

**57. ಹೊರದೂಡುವ ಅಧಿಕಾರ:–** ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕಟ್ಟಡದ ಒಡೆಯನ ಮನವಿಯ ಮೇಲಾಗಲಿ ಅಥವಾ ತನ್ನ ಬಳಿಯಿರುವ ಇತರ ಮಾಹಿತಿ ಮೇಲಾಗಲಿ ಕಟ್ಟಡದ ಅಧಿಭೋಗದಾರರು–

(i) ನಿಯಮಿಸಿದ ಪ್ರಾಧಿಕಾರವು ಹೊರಡಿಸಿದ ಯಾವುದೇ ನೋಟೀಸು, ಆದೇಶ ಅಥವಾ ನಿರ್ದೇಶನದ; ಅಥವಾ

(ii) ಒಡೆಯನು ಹೊರಡಿಸಿದ ಯಾವುದೇ ನೋಟೀಸು ಅಥವಾ ನಿರ್ದೇಶನದ ಅನುಸರಣೆಯಲ್ಲಿ– ಅದನ್ನು ಖಾಲಿ ಮಾಡಿರದಿದ್ದರೆ, ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಂಥ ಹೊರದೂಡುವಿಕೆಯು ಅವಶ್ಯವೆಂದು ಮನದಟ್ಟಾದರೆ, ಅದು ಆದೇಶದ ಮೂಲಕ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಕಟ್ಟಡದಿಂದ ಅಧಿಭೋಗದಾರರ ಹೊರದೂಡುವಿಕೆಗೆ ನಿರ್ದೇಶಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಬಲವನ್ನು ಉಪಯೋಗಿಸಿಬಹುದು ಅಥವಾ ಉಪಯೋಗಿಸುವಂತೆ ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ, ನಿಯಮಿಸಿದ ಪ್ರಾಧಿಕಾರವು ಆ ಕಟ್ಟಡದ ಅನುಭೋಗದಾರರನ್ನು, ಅಲ್ಲಿಂದ ಅವರನ್ನು ಏಕೆ ಹೊರದೂಡಬಾರದೆಂಬುದಕ್ಕೆ ಕಾರಣ ತೋರಿಸಲು ಕೇಳತಕ್ಕದ್ದು ಮತ್ತು ಅಂತಹ ಅಧಿಭೋಗದಾರರು ಇದ್ದರೆ, ಅದನ್ನು ಪರ್ಯಾಲೋಚಿಸಿದ ತರುವಾಯ ಅದು ಸೂಕ್ತವೆಂದು ಭಾವಿಸುವಂತಹ ಆದೇಶಗಳನ್ನು ಮಾಡಬಹುದು.

**58. ಕೊಳಚೆ ಪ್ರದೇಶಗಳಿಂದ ಅಪಾಯಕಾರಿ ಅಥವಾ ಅಸಹ್ಯಕರ ವ್ಯಾಪಾರಗಳನ್ನು ತೆಗೆದುಹಾಕಲು ಅಧಿಕಾರ:–** ನಿಯಮಿಸಿದ ಪ್ರಾಧಿಕಾರವು ಬರಹದಲ್ಲಿನ ಆದೇಶದ ಮೂಲಕ ಕೊಳಚೆ ಪ್ರದೇಶದಲ್ಲಿ ಯಾವುದೇ ಅಪಾಯಕಾರಿ ಅಥವಾ ಅಸಹ್ಯಕರ ವ್ಯಾಪಾರವನ್ನು ನಡೆಸುತ್ತಿರುವ ಯಾವನೇ ವ್ಯಕ್ತಿಯನ್ನು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಕಾಲದೊಳಗೆ ಆ ಪ್ರದೇಶದಿಂದ ಆ ವ್ಯಾಪಾರವನ್ನು ತೆಗೆದುಹಾಕಲು ಬರಹದಲ್ಲಿನ ಆದೇಶದ ಮೂಲಕ ನಿರ್ದೇಶಿಸಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ, ನಿಯಮಿಸಿದ ಪ್ರಾಧಿಕಾರವು ವ್ಯಾಪಾರ ನಡೆಸುತ್ತಿರುವ ವ್ಯಕ್ತಿಯನ್ನು ಏಕೆ ಆದೇಶವನ್ನು ಮಾಡಕೂಡದು ಎಂಬುದಕ್ಕೆ ಕಾರಣ ತೋರಿಸಲು ಕೇಳತಕ್ಕದ್ದು ಮತ್ತು ಅಂಥ ವ್ಯಕ್ತಿಯು ತೋರಿಸಿದ ಕಾರಣ ಯಾವುದಾದರೂ ಇದ್ದರೆ, ಅದನ್ನು ಪರ್ಯಾಲೋಚಿಸಿದ ತರುವಾಯ ತಾನು ಸೂಕ್ತವೆಂದು ಭಾವಿಸುವಂತಹ ಆದೇಶಗಳನ್ನು ನೀಡಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ 'ಅಪಾಯಕಾರಿ ಅಥವಾ ಅಸಹ್ಯಕರ ವ್ಯಾಪಾರ'ವು

(ಕ) ಸಾರಾಯಿ ಅಥವಾ ಹೆಂಡ ಅಥವಾ ಇತರೆ ಮಾದಕ ದ್ರವ್ಯಗಳ ವ್ಯಾಪಾರ; ಮತ್ತು

(ಖ) ಸಹಕಾರ ಸಂಘ ಅಥವಾ ಬ್ಯಾಂಕಿಂಗ್ ಕಂಪನಿಯ ಮೂಲಕವಲ್ಲದೆ ಗಿರವಿ ವ್ಯಾಪಾರ ಅಥವಾ ಲೇವಾದೇವಿ.

–ಇವುಗಳನ್ನು ಒಳಗೊಳ್ಳುತ್ತದೆ.

**59. ಅಪೀಲು:–** (1) ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವಂತೆ ಹೊರತು ನಿಯಮಿಸಿದ ಪ್ರಾಧಿಕಾರವು ಹೊರಡಿಸಿದ ಯಾವುದೇ ನೋಟೀಸು, ಆದೇಶ ಅಥವಾ ನಿರ್ದೇಶನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ನಿಯಮಿಸಬಹುದಾದ ಕಾಲದೊಳಗೆ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(2) ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪೀಲನ್ನು, ಬರಹದಲ್ಲಿನ ಅರ್ಜಿಯ ಮೂಲಕ, ಯಾವ ನೋಟೀಸು, ಆದೇಶ ಅಥವಾ ನಿರ್ದೇಶನಗಳ ವಿರುದ್ಧ ಅಪೀಲು ಮಾಡಿಕೊಳ್ಳಲಾಗಿದೆಯೋ ಆ ನೋಟೀಸು, ಆದೇಶ ಅಥವಾ ನಿರ್ದೇಶನ ಪ್ರತಿಯೊಂದಿಗೆ ಮಾಡತಕ್ಕದ್ದು.

(3) ಅಪೀಲನ್ನು ಅಂಗೀಕರಿಸಿದ ಮೇಲೆ ಸರ್ಕಾರವು ಸಾಕಷ್ಟು ಕಾರಣಕ್ಕಾಗಿ ಯಾವ ನೋಟೀಸು, ಆದೇಶ ಅಥವಾ ನಿರ್ದೇಶನದ ವಿರುದ್ಧ ಅಪೀಲನ್ನು ಮಾಡಿಕೊಳ್ಳಲಾಗಿದೆಯೋ, ಆ ನೋಟೀಸು, ಆದೇಶ ಅಥವಾ ನಿರ್ದೇಶನದ ಜಾರಿಗೆ ಸಂಬಂಧಪಟ್ಟ ಎಲ್ಲಾ ವ್ಯವಹರಣೆಗಳನ್ನು ತಡೆಹಿಡಿಯುವ ಆದೇಶವನ್ನು ಮಾಡಬಹುದು.

(4) ಈ ಪ್ರಕರಣದ ಮೇರೆಗಿನ ಯಾವುದೇ ಅಪೀಲನ್ನು, ಅಪೀಲುದಾರನ ಅಹವಾಲನ್ನು ಕೇಳಿದ ಅಥವಾ ಅಹವಾಲನ್ನು ಮಾಡಿಕೊಳ್ಳಲು ಅವಕಾಶ ಕೊಟ್ಟ ಹೊರತು, ತೀರ್ಮಾನಿಸತಕ್ಕದ್ದಲ್ಲ.

(5) ಅಪೀಲಿನ ಮೇಲೆ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

**60. ಕೆಲವು ಪ್ರಕರಣಗಳಲ್ಲಿ ಕಟ್ಟಡಗಳನ್ನು ಕೆಡವಿ ಹಾಕುವುದಕ್ಕಾಗಿ ಆದೇಶ:–** 14ನೇ ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಪರಿಬಂಧ ಷರತ್ತು ಅಥವಾ ಯಾವುದೇ ಕೊಳಚೆ ನಿರ್ಮೂಲನದ ಪುನರ್ ಅಭಿವೃದ್ಧಿಯ ಯೋಜನೆಯ ಉಲ್ಲಂಘನೆಯಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸು, ಆದೇಶ ಅಥವಾ ನಿರ್ದೇಶನವನ್ನು ಉಲ್ಲಂಘಿಸಿ, ಯಾವುದೇ ಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸಿರುವಲ್ಲಿ ಅಥವಾ ನಡೆಸುತ್ತಿರುವಲ್ಲಿ ಅಥವಾ ಪೂರ್ಣಗೊಳಿಸಿರುವಲ್ಲಿ ನಿಯಮಿಸಿದ ಪ್ರಾಧಿಕಾರವು, ಈ ಅಧಿನಿಯಮದ ಅಥವಾ ಯಾವುದೇ ಕಾನೂನಿನ ಮೇರೆಗೆ ಕೈಗೊಳ್ಳಬಹುದಾದಂಥ ಯಾವುದೇ ಇತರ ಪರಿಹಾರೋಪಾಯದ ಜೊತೆಗೆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅರವತ್ತು ದಿನಗಳಿಗೆ ಮೀರದ ಕಾಲದೊಳಗೆ ಅದರ ಒಡೆಯನು ಅಂಥ ಕಟ್ಟಡವನ್ನು ಕೆಡವಿ ಹಾಕತಕ್ಕದ್ದೆಂದು ನಿರ್ದೇಶಿಸುವ ಆದೇಶವನ್ನು ಮಾಡಬಹುದು ಮತ್ತು ನಿರ್ದಿಷ್ಟಪಡಿಸಿದ ಕಾಲದೊಳಗೆ ಆದೇಶವನ್ನು ಪಾಲಿಸಲು ಒಡೆಯನು ತಪ್ಪಿದಲ್ಲಿ, ನಿಯಮಿಸಿದ ಪ್ರಾಧಿಕಾರವು ತಾನೇ ಕಟ್ಟಡವನ್ನು ಕೆಡವಿ ಹಾಕುವಂತೆ ಮಾಡಬಹುದು ಮತ್ತು 61ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಅದರ ಸಾಮಗ್ರಿಗಳನ್ನು ಮಾರಾಟ ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂದೆ ನಿಯಮಿಸಿದ ಪ್ರಾಧಿಕಾರವು, ಆದೇಶವನ್ನು ಏಕೆ ಮಾಡಬಾರದೆಂಬುದಕ್ಕೆ ಕಾರಣ ತೋರಿಸಲು ಒಡೆಯನನ್ನು ಕೇಳತಕ್ಕದ್ದು ಮತ್ತು ಅಂತಹ ಒಡೆಯನು ತೋರಿಸಿದ ಕಾರಣ ಯಾವುದಾದರೂ ಇದ್ದರೆ, ಅದನ್ನು ಪರ್ಯಾಲೋಚಿಸಿದ ತರುವಾಯ, ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

**61. ಕೆಡವಿ ಹಾಕಲಾದ ಕಟ್ಟಡದ ಸಾಮಗ್ರಿಗಳ ಮಾರಾಟ ಉತ್ಪತ್ತಿಗಳ ವಿಲೆ ಮತ್ತು ವೆಚ್ಚಗಳ ವಸೂಲಿ:–** (1) 10ನೇ ಪ್ರಕರಣದ, 13ನೇ ಪ್ರಕರಣದ ಅಥವಾ 60ನೇ ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು ಕೆಡವಿ ಹಾಕಿದ ಯಾವುದೇ ಕಟ್ಟಡದ ಸಾಮಗ್ರಿಗಳನ್ನು ಮಾರಾಟ ಮಾಡುವಲ್ಲಿ, ನಿಯಮಿಸಿದ ಪ್ರಾಧಿಕಾರವು, ಅಂಥ ಮಾರಾಟದ ಉತ್ಪತ್ತಿಗಳನ್ನು ಆ ಪ್ರಕರಣದ ಮೇರೆಗೆ ಪ್ರಾಧಿಕಾರವು ವಹಿಸಿದ ವೆಚ್ಚಗಳ ಸಂದಾಯಕ್ಕೆ ಅಥವಾ ಅದರ ಬಗ್ಗೆ ವಿನಿಯೋಗಿಸತಕ್ಕದ್ದು ಮತ್ತು ಅಂಥ ಮಾರಾಟದಿಂದ ಒದಗಿಬಂದ ಯಾವುದೇ ಹೆಚ್ಚಳವನ್ನು ಮಾಡಿದ ತಗಾದೆಯ ಮೇಲೆ ಒಡೆಯನಿಗೆ ಅಥವಾ ಮಾರಾಟದ ದಿನಾಂಕದಿಂದ ಹನ್ನೆರಡು ತಿಂಗಳೊಳಗಾಗಿ ಅದಕ್ಕೆ ಹಕ್ಕುಳ್ಳ ಇತರ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು. ಅಂಥ ಯಾವುದೇ ತಗಾದೆಯನ್ನು ಮಾಡದಿದ್ದರೆ ಅಂತಹ ಹೆಚ್ಚಳವನ್ನು ಸರ್ಕಾರದಲ್ಲಿ ಅಥವಾ ಅದು ನಿರ್ದಿಷ್ಟಪಡಿಸುವ ಪ್ರಾಧಿಕಾರದಲ್ಲಿ ಠೇವಣಿ ಇಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುವೇ ವೆಚ್ಚಗಳನ್ನು, ಆ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಕಟ್ಟಡದ ಸಾಮಗ್ರಿಗಳ ಮಾರಾಟದ ಉತ್ಪತ್ತಿಗಳಿಂದ ಪೂರೈಸಲಾಗದಿದ್ದರೆ, ಅವನು ಆ

ಕಟ್ಟಡದ ಒಡೆಯ ಅಥವಾ ಅದರಲ್ಲಿ ಹಿತಾಸಕ್ತಿ ಹೊಂದಿರುವ ಯಾವನೇ ಇತರ ವ್ಯಕ್ತಿಯಿಂದ ನಿಯಮಿಸಿದ ಪ್ರಾಧಿಕಾರಿಯು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

**62. ದಂಡನೆಗಳು:–** (1) ಯಾವನೇ ವ್ಯಕ್ತಿಯು.–

(ಕ) 14ನೇ ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಪರಿಬಂಧ ಅಥವಾ ಷರತ್ತನ್ನು ಅಥವಾ ಕೊಳಚೆ ನಿರ್ಮೂಲನ ಪ್ರದೇಶದ ಪುನರಾಭಿವೃದ್ಧಿಗಾಗಿನ ಯಾವುದೇ ಯೋಜನೆಯನ್ನು ಉಲ್ಲಂಘಿಸಿ ಯಾವುದೇ ಕಾಮಗಾರಿಯನ್ನು ಪ್ರಾರಂಭಿಸಿದರೆ ಅಥವಾ ಪ್ರಾರಂಭಿಸುವಂತೆ ಮಾಡಿದರೆ; ಅಥವಾ

(ಖ) ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸು, ಆದೇಶ ಅಥವಾ ನಿರ್ದೇಶನವನ್ನು ಉಲ್ಲಂಘಿಸಿದರೆ ಅಥವಾ ಪಾಲಿಸಲು ತಪ್ಪಿದರೆ, ಮೊದಲನೆಯ ಅಪರಾಧಕ್ಕೆ ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಎರಡನೆಯ ಅಥವಾ ಯಾವುದೇ ತರುವಾಯದ ಅಪರಾಧಕ್ಕೆ ಆರು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

(2) ಈ ಯಾವುದೇ ಭೂಮಿ ಅಥವಾ ಕಟ್ಟಡದೊಳಗೆ ಅಥವಾ ಅದರ ಮೇಲೆ ಪ್ರವೇಶಿಸಲು ಈ ಅಧಿನಿಯಮದ ಮೇರೆಗೆ ಅಧಿಕೃತನಾದ ಯಾವನೇ ವ್ಯಕ್ತಿಯನ್ನು ಅಡ್ಡಪಡಿಸುವ ಅಥವಾ ಅಂಥ ಪ್ರದೇಶದ ತರುವಾಯ ವ್ಯಕ್ತಿಯನ್ನು ಪೀಡಿಸುವ ಯಾವನೇ ವ್ಯಕ್ತಿಯು, ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದು.

**63. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ, ಆ ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದ, ಮತ್ತು ಕಂಪನಿಯ ವ್ಯವಹಾರವನ್ನು ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನಗೆ ತಿಳಿಯದ ಹಾಗೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ ಅಂಥ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ, ಅಥವಾ ಅವನ ಯಾವುದೇ ನಿರ್ಲಕ್ಷತೆಯಿಂದ ನಡೆಯಿತೆಂದು ಹೇಳಬಹುದಾಗಿರುವಲ್ಲಿ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ

ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತಮ್ಮ ವಿರುದ್ಧ ವ್ಯವಹರಣೆಗೆ ಅವರು ಗುರಿಯಾಗತಕ್ಕದ್ದು ಹಾಗೂ ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ.–

(ಕ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಮತ್ತು ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಖ) ಫರ್ಮಿಗೆ ಸಂಬಂಧಿಸಿ "ನಿರ್ದೇಶಕ" ಎಂದರೆ, ಫರ್ಮಿನಲ್ಲಿನ ಪಾಲುಗಾರ;

**64. ಪ್ರಾಸಿಕ್ಯೂಷನ್ ಮತ್ತು ಅಪರಾಧಗಳ ಅಧಿವಿಚಾರಣೆ:–** (1) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ, ಯಾವುದೇ ಪ್ರಾಸಿಕ್ಯೂಷನನ್ನು ನಿಯಮಿಸಿದ ಪ್ರಾಧಿಕಾರದ ಪೂರ್ವ ಮಂಜೂರಾತಿಯ ಹೊರತು ಹೂಡತಕ್ಕದ್ದಲ್ಲ.

(2) ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನಿಗಿಂತ ಕೆಳದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**65. ಅಪರಾಧಗಳ ರಾಜಿ:–** (1) ನಿಯಮಿಸಿದ ಪ್ರಾಧಿಕಾರವು ವ್ಯವಹರಣೆಗಳನ್ನು ಹೂಡುವುದಕ್ಕೆ ಮುಂಚಿತವಾಗಿಯೇ ಆಗಲಿ ಅಥವಾ ತರುವಾಯವೇ ಆಗಲಿ ಸಾಮಾನ್ಯ ಅಥವಾ ವಿಶೇಷ ಆದೇಶ ಮೂಲಕ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ರಾಜಿ ಮಾಡಿಕೊಳ್ಳಬಹುದು.

(2) ಅಪರಾಧವನ್ನು ರಾಜಿ ಮಾಡಿಕೊಂಡಿರುವಾಗ, ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ರಾಜಿಮಾಡಿಕೊಂಡ ಅಪರಾಧಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧ ಯಾವುದೇ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**66. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪರಿಷೇಧ:–** ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದ್ದ ಹೊರತು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವ ವಿಷಯವನ್ನು ನಿರ್ಧರಿಸಲು ಸರ್ಕಾರ ಅಥವಾ ನಿಯಮಿಸಿದ ಪ್ರಾಧಿಕಾರಿಯನ್ನು ಶಕ್ತಗೊಳಿಸಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಕೈಗೊಂಡ ಅಥವಾ ಕೈಗೊಳ್ಳಬೇಕಾದ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರಿಯು ಯಾವುದೇ ನಿರ್ಬಂಧಕಾಜ್ಞೆಯನ್ನು ಕೊಡತಕ್ಕದ್ದಲ್ಲ.

**67. ನಿಯಮಿಸಿದ ಪ್ರಾಧಿಕಾರಿ ಮುಂತಾದವರು ಲೋಕ ನೌಕರರಾಗಿರತಕ್ಕುದು:–** ಈ ಅಧಿನಿಯಮದ ಮೇರೆಗೆ ನಿಯಮಿಸಿದ ಪ್ರಾಧಿಕಾರಿ ಮತ್ತು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯನ್ನು 1860ರ ಭಾರತ ದಂಡ ಸಂಹಿತೆಯ (1860ರ ಕೇಂದ್ರ ಅಧಿನಿಯಮ XLV) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂಬುದಾಗಿ ಭಾವಿಸತಕ್ಕದ್ದು.

**68. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ:–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ

ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವಿರುವ ಯಾವುದೇ ಹಾನಿಗಾಗಿ ಸರ್ಕಾರ ಅಥವಾ ನಿಯಮಿಸಿದ ಪ್ರಾಧಿಕಾರಿ ಅಥವಾ ಸರ್ಕಾರದ ಅಥವಾ ನಿಯಮಿಸಿದ ಪ್ರಾಧಿಕಾರಿಯ ಅಧೀನದಲ್ಲಿರುವ ಯಾವನೇ ಪ್ರಾಧಿಕಾರಿ ಅಥವಾ ಅಧಿಕಾರಿಯ ವಿರುದ್ಧ ಯಾವುದೇ ದಾವೆ ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**69. ಸರ್ಕಾರದ ಅಧಿಕಾರಿಗಳ ಪ್ರತ್ಯಾಯೋಜನೆ:–** (1) ಸರ್ಕಾರವು, ಅಧಿಸೂಚನೆ ಮೂಲಕ ಈ ಅಧಿನಿಯಮದ ಮೂಲಕ ಅದರಲ್ಲಿ ನಿಹಿತವಾದ (17ನೇ ಪ್ರಕರಣದ ಮೇರೆಗೆ ಭೂಮಿಯನ್ನು ಅರ್ಜಿಸಿಕೊಳ್ಳುವ ಅಧಿಕಾರ ಮತ್ತು 71ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರಗಳನ್ನು ಹೊರತುಪಡಿಸಿ) ಯಾವುದೇ ಅಧಿಕಾರವನ್ನು ಚಲಾಯಿಸಲು ಯಾವನೇ ಪ್ರಾಧಿಕಾರಿ ಅಥವಾ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು ಮತ್ತು ಅಂಥವೇ ರೀತಿಯಲ್ಲಿ ಅಂಥ ಅಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪ್ರತ್ಯಾಯೋಜಿತವಾದ ಯಾವುದೇ ಅಧಿಕಾರವನ್ನು ಚಲಾಯಿಸುವುದು, ನಿಯಮಿಸಬಹುದಾದಂಥ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾಂಥ ಪರಿಬಂಧಗಳು ಮತ್ತು ಷರತ್ತುಗಳಿಗೆ ಮತ್ತು ಸರ್ಕಾರವು ಅಥವಾ ಈ ಬಗ್ಗೆ ಸರ್ಕಾರವು ಶಕ್ತಗೊಳಿಸಬಹುದಾದಂಥ ಅಧಿಕಾರಿಯ ನಿಯಂತ್ರಣ ಮತ್ತು ಪುನರೀಕ್ಷಣೆಗೂ ಸಹ ಒಳಪಟ್ಟಿರತಕ್ಕದ್ದು. ಸರ್ಕಾರವು ಹಾಗೆ ಶಕ್ತಗೊಳಿಸಿದ ಯಾವನೇ ಅಧಿಕಾರಿಯ ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ನಿಯಂತ್ರಿಸಲು ಅಥವಾ ಪುನರೀಕ್ಷಿಸಲು ಸಹ ಅಧಿಕಾರವನ್ನು ಹೊಂದಿರತಕ್ಕದ್ದು.

**70. ಅಧಿನಿಯಮವು ಇತರ ಕಾನೂನುಗಳನ್ನು ಅಧ್ಯಾರೋಹಿಸತಕ್ಕದ್ದು:–** ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ರೂಢಿ, ಆಚರಣೆ ಅಥವಾ ಕರಾರು ಅಥವಾ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶದಲ್ಲಿ ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮವುಳ್ಳದ್ದಾಗಿರತಕ್ಕದ್ದು.

**71. ನಿಯಮ ರಚನಾಧಿಕಾರ:–** (1) ಸರ್ಕಾರವು ಅಧಿಸೂಚನೆ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶವನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು–

(ಕ) ನಿಯಮಿಸಬೇಕೆಂದು ಈ ಅಧಿನಿಯಮದ ಮೂಲಕ ಸ್ಪಷ್ಟವಾಗಿ ಅಗತ್ಯಪಡಿಸಿದ ಅಥವಾ ಅನುಮತಿಸಿದ ಎಲ್ಲ ವಿಷಯಗಳು;

(ಖ) ಈ ಅಧಿನಿಯಮದ ಮೇರೆಗಿನ ಯಾವುದೇ ಅರ್ಜಿ ಅಥವಾ ಹೇಳಿಕೆಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು;

(ಗ) ನಿಯಮಿಸಿದ ಪ್ರಾಧಿಕಾರಿಯ ನೋಟೀಸುಗಳು, ಆದೇಶಗಳು ಮತ್ತು ಇತರ ಲಿಖಿತಗಳನ್ನು ಅನುಪ್ರಮಾಣೀಕರಿಸುವ ರೀತಿ; ಮತ್ತು

(ಘ) ಯಾವುದೇ ಕೊಳಚೆ ಪ್ರದೇಶ ಅಥವಾ ಕೊಳಚೆ ನಿರ್ಮೂಲನ ಪ್ರದೇಶದ ಅಭಿವೃದ್ಧಿಗಾಗಿ ಯೋಜನೆಗಳ ತಯಾರಿಕೆ ಮತ್ತು ಅಂಥ ಯೋಜನೆಗಳನ್ನು ಸೇರಿಸಬೇಕಾದ ವಿಷಯಗಳು;

(ಙ) 5ಗ ಪ್ರಕರಣದ ಮೇರೆಗೆ ಮಂಡಲಿಯು ಅಧಿಕಾರಗಳನ್ನು ಚಲಾಯಿಸುವುದರ ಮೇಲೆ, ಪರಿಬಂಧಗಳು, ಯಾವುದಾದರೂ ಇದ್ದರೆ–

ಅವು ಇವುಗಳ ಬಗ್ಗೆ ಉಪಬಂಧಿಸಬಹುದು ಅಥವಾ ವಿನಿಯಮಿಸಬಹುದು.

**72. ಇತ್ಯರ್ಥದಲ್ಲಿರುವ ಅರ್ಜನೆಯ ಕೆಲವು ಪ್ರಕರಣಗಳಿಗೆ ಅಧಿನಿಯಮದ ಅನ್ವಯ:–** (1) ಈ ಅಧಿನಿಯಮದ ಉಪಬಂಧಗಳು 1894ರ ಭೂ ಅರ್ಜನ ಅಧಿನಿಯಮದ (1894ರ ಕೇಂದ್ರ ಅಧಿನಿಯಮ ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಸದರಿ ಅಧಿನಿಯಮವೆಂದು ಉಲ್ಲೇಖಿಸಲಾಗುವ) ಮೇರೆಗೆ ಒಂದು ಕೊಳಚೆ ಪ್ರದೇಶದಲ್ಲಿನ ಯಾವುದೇ ಭೂಮಿಯ ಆರ್ಜನೆಗಾಗಿ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿದ್ದ, ಆದರೆ, ಅಂಥ ಪ್ರಾರಂಭಕ್ಕೆ ಮುಂಚೆ ಸದರಿ ಅಧಿನಿಯಮದ 11ನೇ ಪ್ರಕರಣದ ಮೇರೆಗೆ ಡೆಪ್ಯೂಟಿ ಕಮಿಷನರನು ಯಾವುದೇ ಐತೀರ್ಪನ್ನು ಮಾಡದಿರುವಂಥ ಯಾವುದೇ ಪ್ರಕರಣದ ಅಥವಾ ಪ್ರಕರಣಗಳಿಗೂ ಸಹ–

(i) ಸದರಿ ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ಅಧಿಸೂಚನೆ; ಅಥವಾ

(ii) ಸದರಿ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಮಾಡಲಾದ ಘೋಷಣೆ; ಅಥವಾ

(iii) ಸದರಿ ಅಧಿನಿಯಮದ 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ನೋಟೀಸು

– ಈ ಅಧಿನಿಯಮ 17ನೇ ಪ್ರಕರಣ ಪರಂತುಕದ ಮೇರೆಗೆ ಭೂ ಆರ್ಜನೆಯ ವಿರುದ್ಧ ಕಾರಣವನ್ನು ತೋರಿಸಲು ಜಾರಿ ಮಾಡಿದ ನೋಟೀಸು ಆಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಅಡಕವಾಗಿರುವುದೋ, ಈ ಅಧಿನಿಯಮದ 17ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಸದರಿ ಭೂಮಿಯು ಅಗತ್ಯವಾಗಿದೆ ಎಂದು ಸರ್ಕಾರಿ ರಾಜಪತ್ರದಲ್ಲಿ ಸರ್ಕಾರವು ನೋಟೀಸನ್ನು ಪ್ರಕಟಿಸಿದ ಹೊರತು ಮತ್ತು ಅವರಿಗೆ ಯಾವುದೇ ಭೂಮಿಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ.

**73. ನಿಯಮಗಳು ಮತ್ತು ಅಧಿಸೂಚನೆಯನ್ನು ಇಡುವುದು:–** ಈ ಅಧಿನಿಯಮದ **69**ನೇ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮ ಅಥವಾ ಹೊರಡಿಸಲಾದ ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯು ಆದಷ್ಟು ಬೇಗನೇ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ

ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ನಿಯಮ ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಅಥವಾ ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮದಿಂದ ಅಥವಾ ಅಧಿಸೂಚನೆಯು ಸರ್ಕಾರವು ಮಾರ್ಪಾಡು ಅಥವಾ ರದ್ದಿಯಾತಿಯನ್ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ ದಿನಾಂಕದಿಂದ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯ ಅಂಥ ನಿಯಮ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
**ಎಂ.ಎಲ್. ರಾಮಸ್ವಾಮಿ,**
ಪ್ರಾರೂಪಕಾರ ಮತ್ತು ಸರ್ಕಾರದ ನಿಮಿತ್ತ
ಸಹ ಕಾರ್ಯದರ್ಶಿ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಇಲಾಖೆ

**1981ರ ಕರ್ನಾಟಕ ಅಧಿನಿಯಮ, ಸಂಖ್ಯೆ 19**

(1981ರ ಏಪ್ರಿಲ್ ಏಳನೇ ದಿನದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)

**1981ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ಅಧಿನಿಯಮ.**

(1981ರ ಏಪ್ರಿಲ್ ಆರನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು) 1973ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ 1973ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮವನ್ನು 1974ರ ಕರ್ನಾಟಕ ಅಧಿನಿಯಮ 33) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1981ರ ಕರ್ನಾಟಕ ಕೊಳಚೆ ಪ್ರದೇಶಗಳ / ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ಅಧಿನಿಯಮವೆಂದು ಕರೆಯತಕ್ಕದ್ದು.

(2) 1980ರ ಡಿಸೆಂಬರ್ ಮೂವತ್ತನೇ ದಿನದಂದು ಇದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(ಪ್ರಕರಣದ 2 ರಿಂದ 5ರ ವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**6. ನಿರಸನ ಮತ್ತು ಉಳಿಸುವಿಕೆಗಳು:–** (1) 1980ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) (ತಿದ್ದುಪಡಿ) ಅಧ್ಯಾದೇಶವು (1980ರ ಕರ್ನಾಟಕ ಅಧ್ಯಾದೇಶ ಸಂ. 17) ಈ ಮೂಲಕ ನಿರಸಿತವಾಗಿದೆ.

(2) ಅಂಥ ನಿರಸನ ಇದ್ದಾಗ್ಯೂ, ಸದರಿ ಅಧ್ಯಾದೇಶ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಕಾರ್ಯ ಅಥವಾ ಕೈಗೊಂಡಿರುವ ಕ್ರಮ ಎಂದು ಭಾವಿಸತಕ್ಕದ್ದು.

**ಆರೋಗ್ಯ ಮತ್ತು ಪೌರಸಭಾ ಆಡಳಿತ ಸಚಿವಾಲಯ**

ಅಧಿಸೂಚನೆ ಬೆಂಗಳೂರು, ದಿನಾಂಕ 29ನೇ ಅಕ್ಟೋಬರ್ 1974

ಎಸ್.ಓ 1875–1973ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮದ (1974ರ ಕರ್ನಾಟಕ ಅಧಿನಿಯಮ 33) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 1974ನೇ ನವೆಂಬರ್ 1ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಸಂಖ್ಯೆ ಹೆಚ್‌ಎಂಎ 213 ಎಂಎನ್‌ಐ 74

**ಕೆ.ಜಿ. ರಾಜಣ್ಣ,**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಪೌರಸಭಾ ಆಡಳಿತ ಇಲಾಖೆ.

## ಆರೋಗ್ಯ ಮತ್ತು ಪೌರಸಭಾ ಆಡಳಿತ ಸಚಿವಾಲಯ

ಅಧಿಸೂಚನೆಯ ಸಂ. ಹೆಚ್.ಎಂ.ಎ. 227 ಎಂ.ಎನ್.ಎ. 74 ಬೆಂಗಳೂರು, ದಿನಾಂಕ 24ನೇ ಜನವರಿ 75

ಜಿ.ಎಸ್.ಆರ್. 21–1974ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ನಿಯಮಗಳ ಕರಡನ್ನು, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು 1974ನೇ ನವೆಂಬರ್ 30ರಂದು ಅಥವಾ ಅದಕ್ಕೂ ಮುಂಚೆ ಆಹ್ವಾನಿಸಿ, ಕರ್ನಾಟಕ 1973ರ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ, (1974ರ ಕರ್ನಾಟಕ ಅಧಿನಿಯಮ ಸಂಖ್ಯೆ 33)ದ 71ನೇ ಪ್ರಕರಣದ 1ನೇ ಉಪ ಪ್ರಕರಣದಿಂದ ಅಗತ್ಯಪಡಿಸಲಾದಂತೆ 1974ರ ನವೆಂಬರ್ 15ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ iv ರಲ್ಲಿ 2–ಸಿ (i) ವಿಭಾಗದಲ್ಲಿ ಜಿ.ಎಸ್.ಆರ್. 314 ಎ ದಿನಾಂಕ 11ನೇ ನವೆಂಬರ್ 1974 ಅಧಿಸೂಚನೆಯ ಮೂಲಕ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು ಸಾರ್ವಜನಿಕರಿಗೆ 1974ನೇ ನವೆಂಬರ್ 15ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಬಗ್ಗೆ ಯಾವುವೇ ಆಕ್ಷೇಪಣೆಗಳು ಅಥವಾ ಸಲಹೆಗಳು ಬಂದಿಲ್ಲದಿರುವುದರಿಂದ;

ಆದುದರಿಂದ, ಈಗ 1973ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮದ (1974ರ ಕರ್ನಾಟಕ ಅಧಿನಿಯಮ 33) 71ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸುತ್ತದೆ ಎಂದರೆ;–

**1. ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು, 1975ರ ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ನಿಯಮಗಳು ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು–

(ಕ) "ಅಧಿನಿಯಮ" ಎಂದರೆ, 1973 ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ, (1974ರ ಕರ್ನಾಟಕ ಅಧಿನಿಯಮ 33)

(ಖ) "ನಮೂನೆ" ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಗ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ.

**3. ವಿವರಣೆ ಪತ್ರದ ನಮೂನೆ:–** (1) 4ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಖಂಡದಲ್ಲಿ ಉಲ್ಲೇಖಿಸಿದ ವಿವರಣಾ ಪತ್ರವು ನಮೂನೆ 1ರಲ್ಲಿರತಕ್ಕದ್ದು.

(2) ಸದರಿ ವಿವರಣಾ ಪತ್ರವು, 3ನೇ ಪ್ರಕರಣದ (1)ನೇ ಉಪಪ್ರಕರಣಗಳಲ್ಲಿ ಉಲ್ಲೇಖಿಸಿದ ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನಿಯಮಿಸಿದ ಪ್ರಾಧಿಕಾರರಿಗೆ ಕಳುಹಿಸತಕ್ಕದ್ದು.

**4. ಕಟ್ಟಡಗಳ ರಿಜಿಸ್ಟರು:–** (1) ಕೊಳಚೆ ಪ್ರದೇಶದಲ್ಲಿ ಕಟ್ಟಡಗಳ ನೋಂದಣಿಗಾಗಿ ನಿಯಮಿಸಿದ ಪ್ರಾಧಿಕಾರಿಯು ಇಟ್ಟುಕೊಂಡ ರಿಜಿಸ್ಟರು ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ.–

(ಕ) ಕಟ್ಟಡದ ಒಡೆಯ ಮತ್ತು ಅಥವಾ ಅಧಿಭೋಗದಾರನ ಹೆಸರು;

(ಖ) ಕಟ್ಟಡದ ವಿಸ್ತೀರ್ಣ;

(ಗ) ಮುನ್ಸಿಪಲ್ ಸಂಖ್ಯೆ;

(ಘ) ಒಡೆಯ/ಅಧಿಭೋಗದಾರನ ವಿಳಾಸ;

(2) 4ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಂದಣಿ ಪ್ರಮಾಣ ಪತ್ರವು ನಮೂನೆ 2ರಲ್ಲಿರತಕ್ಕದ್ದು.

**5. ಕಟ್ಟಡಗಳನ್ನು ಕಟ್ಟಲು ಅನುಮತಿಗಾಗಿನ ಅರ್ಜಿಯ ನಮೂನೆ:–** (1) ಕೊಳಚೆ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಲು 5ನೇ ಪ್ರಕರಣದ ಮೇರೆಗೆ ಅನುಮತಿಯನ್ನು ಪಡೆಯಲಿಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು–3ನೇ ನಮೂನೆಯಲ್ಲಿ ನಿಯಮಿಸಿದ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಅರ್ಜಿಯು ಈ ಕೆಳಕಂಡ ಮಾಹಿತಿಯನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಕ) ಉದ್ದೇಶಿತ ಕಟ್ಟಡವನ್ನು ಕಟ್ಟುವುದಕ್ಕಾಗಿನ ಅಗತ್ಯತೆ;

(ಖ) ಉದ್ದೇಶಿತ ಕಟ್ಟಡಕ್ಕೆ ಸಮುಚಿತ ಪ್ರಾಧಿಕಾರಿಯ ಮಂಜರೂತಿಯನ್ನು ಪಡೆಯಲಾಗಿದೆಯೇ?

**6. ಯಾವ ಅವಧಿಯೊಳಗೆ ಕಟ್ಟಡವನ್ನು ಕೆಡವಿ ಹಾಕತಕ್ಕದ್ದು:–** 9ನೇ ಪ್ರಕರಣದ (3)ನೆ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದ ಅನುಸರಣೆಯಲ್ಲಿ ಕಟ್ಟಡವನ್ನು ಕೆಡವಿ ಹಾಕಬೇಕಾದಂಥ ಅವಧಿಯು ಸದರಿ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ 20 (ಇಪ್ಪತ್ತು) ದಿವಸಗಳಾಗಿರತಕ್ಕದ್ದು:

ಪರಂತು, ನಿಯಮಿಸಿದ ಪ್ರಾಧಿಕಾರಿಯು, ಈ ಬಗ್ಗೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಮೂವತ್ತು ದಿವಸಗಳಿಗೆ ಮೀರದಂತೆ ಹೆಚ್ಚಿನ ಕಾಲವನ್ನು ಮಂಜೂರು ಮಾಡಬಹುದು.

**7. ಕೊಳಚೆ ನಿರ್ಮೂಲನ ಪ್ರದೇಶದಲ್ಲಿ ಭೂಮಿ ಹಾಗೂ ಕಟ್ಟಡವನ್ನು ಬರಿದು ಮಾಡುವುದಕ್ಕಾಗಿನ ಅವಧಿ:–** 12ನೇ ಪ್ರಕರಣದ ಉದ್ದೇಶಕ್ಕಾಗಿನ ಅವಧಿಯು, 11ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 60 (ಅರವತ್ತು) ದಿವಸಗಳಾಗಿರತಕ್ಕದ್ದು.

**8. 28ನೇ ಪ್ರಕರಣದ ಮೇರೆಗಿನ ಅರ್ಜಿಯ ನಮೂನೆ:–** 28ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ನಿಯಮಿಸಿದ ಪ್ರಾಧಿಕಾರಿಯಿಂದ ಅನುಮತಿ ಪಡೆಯಲು ಇಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು ಈ ಕೆಳಕಂಡ ವಿವರಗಳನ್ನೊಳಗೊಂಡ ನಮೂನೆ 4ರಲ್ಲಿ ನಿಯಮಿಸಿದ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು:–

(i) ಕಟ್ಟಡ ಅಥವಾ ಭೂಮಿಯ ವಿವರಣೆ;

(ii) ಬಾಡಿಗೆದಾರನನ್ನು ಹೊರದೂಡಲು ದಾವೆ ಅಥವಾ ವ್ಯವಹರಣೆಗಳನ್ನು ಹೂಡುವುದಕ್ಕಾಗಿನ ಅಥವಾ ಬಾಡಿಗೆದಾರನನ್ನು ಹೊರದೂಡುವುದಕ್ಕಾಗಿ ಯಾವುದೇ ಡಿಕ್ರಿ ಅಥವಾ ಆದೇಶದ ಅಮಲ್ಜಾರಿಗಾಗಿ ಕಾರಣಗಳು.

**9. ಖಾಲಿ ಮಾಡಿದ ಆವರಣಗಳ ಸ್ವಾಧೀನವನ್ನು ವಾಪಸು ಕೊಡುವುದು:–** (1) 30ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಘೋಷಣೆಯನ್ನು, ಬಾಡಿಗೆದಾರನು ಕಟ್ಟಡವನ್ನು ಖಾಲಿ ಮಾಡಿದ ಅಥವಾ ಅದರಿಂದ ಹೊರದೂಡಲಾದ ದಿನಾಂಕದಿಂದ 15 (ಹದಿನೈದು) ದಿವಸಗಳೊಳಗೆ ದಾಖಲ್ಮಾಡತಕ್ಕದ್ದು.

(2) ಸದರಿ ಪ್ರಕರಣದ (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿನ ಕಾಲವು, ಅದರಲ್ಲಿ ಉಲ್ಲೇಖಿಸಿದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ 30 (ಮೂವತ್ತು) ದಿವಸಗಳಾಗಿರತಕ್ಕದ್ದು.

(3) 31ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಬಾಡಿಗೆಯನ್ನು ತಾತ್ಕಾಲಿವಾಗಿ ನಿರ್ಧರಿಸುವ ಆದೇಶವನ್ನು, ಬಾಡಿಗೆದಾರನಿಗೆ ಖುದ್ದಾಗಿ ಅವನಿಗೆ ಅದನ್ನು ವಶಾವಣೆ ಮಾಡುವ ಮೂಲಕ ತಿಳಿಸತಕ್ಕದ್ದು. ಅದನ್ನು ಹಾಗೆ ವಶಾವಣೆ ಮಾಡಲು ಆಗದಿದ್ದರೆ, ಅವನೊಂದಿಗೆ ವಾಸಿಸುವ ಅವನ ಕುಟುಂಬದ ಯಾವನೇ ವಯಸ್ಕ ಪುರುಷ ಸದಸ್ಯನಿಗೆ ವಶಾವಣೆ ಮಾಡತಕ್ಕದ್ದು ಮತ್ತು ಅಂಥ ಯಾವನೇ ವಯಸ್ಕ ಸದಸ್ಯನಿಲ್ಲದಿದ್ದರೆ, ಆದೇಶದ ಪ್ರತಿಯನ್ನು ಬಾಡಿಗೆದಾರನು ಕೊನೆಯದಾಗಿ ವಾಸಿಸುತ್ತಿದ್ದನೆಂದು ತಿಳಿದಿರುವಂಥ ಕಟ್ಟಡದ ಹೊರ ಬಾಗಿಲಿನ ಅಥವಾ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸತಕ್ಕದ್ದು.

(4) 30ನೇ ಪ್ರಕರಣ (4)ನೇ ಉಪಪ್ರಕರಣದ ಉದ್ದೇಶಗಳಿಗಾಗಿನ ಕಾಲವು, ಸದರಿ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ತಿಳುವಳಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ (ಹತ್ತು) 10 ದಿವಸಗಳಾಗಿರತಕ್ಕದ್ದು.

**10. ಮಂಡಲಿ ಸದಸ್ಯರು ಸಂಖ್ಯೆ:–** ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಲಿಯು,–

(ಕ) ಐವರು ಅಧಿಕಾರಗಳನ್ನು; ಮತ್ತು

(ಖ) ಒಂಬತ್ತು ಅಧಿಕಾರೇತರರನ್ನು–ಒಳಗೊಂಡಿರತಕ್ಕದ್ದು.

**11. ಅಧ್ಯಕ್ಷ ಮತ್ತು ಇತರ ಸದಸ್ಯರ ಸೇವಾ ಷರತ್ತುಗಳು:–** (1) ಅಧಿಕಾರಿಯನ್ನು ಅಧ್ಯಕ್ಷನನ್ನಾಗಿ ನೇಮಿಸಿರುವಲ್ಲಿ ಅವನಿಗೆ ಅವನ ಶ್ರೇಣಿಯ ವೇತನ ಮತ್ತು ಪ್ರತಿ ತಿಂಗಳಿಗೆ 150 ರೂ. ಗಳ ವಿಶೇಷ ವೇತನವನ್ನು ಸಂದಾಯ ಮಾಡತಕ್ಕದ್ದು. ಅಧಿಕಾರೇತರನನ್ನು ಅಧ್ಯಕ್ಷನನ್ನಾಗಿ ನೇಮಿಸಿದಾಗ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಪರಿಶ್ರಮಧನ ಮತ್ತು ಪರಿಹಾರ ಭತ್ಯೆಯನ್ನು ಅವನಿಗೆ ಸಂದಾಯ ಮಾಡತಕ್ಕದ್ದು:

ಪರಂತು, ನೇಮಕಗೊಂಡ ವ್ಯಕ್ತಿಯು ಶಾಸಕನಾಗಿರುವಲ್ಲಿ ಅವನು–

(ಕ) ತಿಂಗಳೊಂದಕ್ಕೆ 700 ರೂಪಾಯಿಗಳಿಗೆ ಮೀರದ ಬಾಡಿಗೆಯ ಸುಸಜ್ಜಿತ ಮನೆ ಅಥವಾ ಅದಕ್ಕೆ ಬದಲಾಗಿ ತಿಂಗಳೊಂದಕ್ಕೆ ಗರಿಷ್ಠ 500 ರೂಪಾಯಿಗಳಿಗೆ ಒಳಪಟ್ಟು ವಾಸ್ತವಿಕವಾಗಿ ಸಂದಾಯ ಮಾಡಿದ ಅಥವಾ ಸಂದಾಯ ಮಾಡಬೇಕಾದ ಮಿತಿಗೊಳಪಟ್ಟು ಮನೆ ಬಾಡಿಗೆ ಭತ್ಯ;

(ಖ) ಪೆಟ್ರೋಲ್ ಮತ್ತು ಎಣ್ಣೆ ವೆಚ್ಚಗಳನ್ನು ಅಧ್ಯಕ್ಷನು ವಹಿಸುವ ಚಾಲಕ ಸಹಿತ ವಾಹನ ಮತ್ತು ತಿಂಗಳೊಂದಕ್ಕೆ 500 ರೂಪಾಯಿಗಳ ವಾಹನ ಭತ್ಯೆ;

(ಗ) ಕರ್ತವ್ಯದ ಮೇಲೆ ಪ್ರವಾಸ ಮಾಡುವಾಗ ಈ ಕೆಳಕಂಡ ದರಗಳಲ್ಲಿ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ;

(i) ರೈಲು ಮೂಲಕ ಪ್ರಯಾಣಕ್ಕಾಗಿ ಒಂದು ಪ್ರಥಮ ದರ್ಜೆ ಹಾಸಲಿನ ಒಂದೂವರೆಯಷ್ಟು;

(ii) ರಸ್ತೆ ಮೂಲಕ ಪ್ರಯಾಣಕ್ಕಾಗಿ ಕಿಲೋಮೀಟರ್ ಒಂದಕ್ಕೆ 75 ಪೈಸೆಯಂತೆ ರಸ್ತೆ ಮೈಲು ಭತ್ಯೆ;

(iii) ರಾಜ್ಯದೊಳಗೆ ಪ್ರವಾಸಗಳಿಗಾಗಿ ದಿನವೊಂದಕ್ಕೆ 31 ರೂಪಾಯಿಗಳ ಮತ್ತು ರಾಜ್ಯದ ಹೊರಗಿನ ಪ್ರವಾಸಗಳಿಗಾಗಿ ದಿನವೊಂದಕ್ಕೆ 50 ರೂಪಾಯಿಗಳ ದಿನಭತ್ಯೆ; ಮತ್ತು

(iv) ಭಾರತದ ಹೊರಗಿನ ಪ್ರವಾಸಗಳಿಗಾಗಿ ರೈಲು, ಸಮುದ್ರ ಅಥವಾ ವಿಮಾನಯಾನದ ಪ್ರವಾಸಗಳಿಗಾಗಿನ ವಾಸ್ತವಿಕ ವೆಚ್ಚಗಳ ಮತ್ತು ವಾಸ್ತವಿಕ ವೆಚ್ಚಗಳ ಮಿತಿಗೊಳಪಟ್ಟು ದಿನವೊಂದಕ್ಕೆ 150 ರೂಪಾಯಿಗಳಿಗೆ ಮೀರದ ದಿನಭತ್ಯೆ–ಇವುಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ಇತರ ಸದಸ್ಯರಿಗೆ ಮಂಡಲಿಯ ಸಭೆಗಳ ಉಪವೇಶನಕ್ಕೆ ದಿನವೊಂದಕ್ಕೆ 50 ರೂಪಾಯಿಗಳ ಉಪವೇಶನ ಫೀಜನ್ನು ಮಾತ್ರ ಸಂದಾಯ ಮಾಡತಕ್ಕದ್ದು ಮತ್ತು ಅವರಿಗೆ ರಾಜ್ಯ ಸೇವೆಗಳ 1ನೇ ದರ್ಜೆ ಅಧಿಕಾರಿಗಳಿಗೆ ಅನ್ವಯಿಸುವ ದರಗಳಲ್ಲಿ ಮತ್ತು ಷರತ್ತುಗಳಿಗೊಳಪಟ್ಟು ಪ್ರಯಾಣ ಭತ್ಯೆಯನ್ನು ಹೊರತುಪಡಿಸಿ, ಇತರ ಯಾವುದೇ ಭತ್ಯೆ ಅಥವಾ ಪರಿಶ್ರಮ ಧನವನ್ನು ಸಂದಾಯ ಮಾಡತಕ್ಕದ್ದಲ್ಲ.

**12. ಅಪೀಲು ದಾಖಲ್ಮಾಡುವುದಕ್ಕಾಗಿನ ಅವಧಿ:–** ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅಪೀಲನ್ನು ದೂರಿದ ನೋಟೀಸು, ಆದೇಶ ಅಥವಾ ನಿರ್ದೇಶನವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಸಲ್ಲಿಸತಕ್ಕದ್ದು.

**13. ನೋಟೀಸುಗಳ ಅನುಪ್ರಮಾಣೀಕರಣ:–** ಈ ಅಧಿನಿಯಮದ ಮೇರೆಗೆ ನಿಯಮಿಸಿದ ಪ್ರಾಧಿಕಾರಿಯು ಹೊರಡಿಸಿದ ಪ್ರತಿಯೊಂದು ನೋಟೀಸನ್ನು, ಆ ಪ್ರಾಧಿಕಾರಿಯು ಅಥವಾ ಬಗ್ಗೆ ಆ ಪ್ರಾಧಿಕಾರದಿಂದ ಅಧಿಕೃತನಾದ ಅಧಿಕಾರಿಯು ಸಹಿ ಮಾಡತಕ್ಕದ್ದು ಮತ್ತು ಆ ಪ್ರಾಧಿಕಾರಿ ಅಥವಾ ಅಧಿಕಾರಿಯ ಹಸ್ತಾಕ್ಷರ ಮುದ್ರೆಯನ್ನು ಅದು ಹೊಂದಿದ್ದರೆ ನೋಟೀಸಿಗೆ ಸರಿಯಾಗಿ ರುಜು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

**14. ಆದೇಶಗಳು ಮತ್ತು ಇತರ ಲಿಖಿತಗಳ ಅನುಪ್ರಮಾಣೀಕರಣ:–** ಈ ಅಧಿನಿಯಮದ ಮೇರೆಗೆ ನಿಯಮಿಸಿದ ಪ್ರಾಧಿಕಾರಿಯು ಮಾಡಿದ ಎಲ್ಲ ಆದೇಶಗಳು ಮತ್ತು ಇತರ ಲಿಖಿತಗಳನ್ನು ನಿಯಮಿಸಿದ ಪ್ರಾಧಿಕಾರಿಯು ಅಥವಾ ಈ ಬಗ್ಗೆ ನಿಯಮಿಸಿದ ಪ್ರಾಧಿಕಾರಿಯು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಅಧಿಕಾರಿಯ ರುಜುವಿನ ಮೂಲಕ ಅನುಪ್ರಮಾಣೀಕೃತವಾಗತಕ್ಕದ್ದು.

**15. ಕೊಳಚೆ ಪ್ರದೇಶದ ಅಥವಾ ಕೊಳಚೆ ನಿರ್ಮೂಲನಾ ಪ್ರದೇಶದ ಪುನರಭಿವೃದ್ಧಿಗಾಗಿ ಯೋಜನೆಗಳು:–** ಯಾವುದೇ ಕೊಳಚೆ ಪ್ರದೇಶ ಅಥವಾ ಕೊಳಚೆ ನಿರ್ಮೂಲನ ಪ್ರದೇಶದ ಪುನರಭಿವೃದ್ಧಿಗಾಗಿನ ಪ್ರತಿಯೊಂದು ಯೋಜನೆಯು ಈ ಕೆಳಕಂಡವುಗಳನ್ನು ಒಳಗೊಳ್ಳತಕ್ಕದ್ದು.

(ಕ) ಅರ್ಜನೆಗಾಗಿ ಉದ್ದೇಶಿಸಿದ ಸ್ವತ್ತಿನ ವಿವರಣೆ;

(ಖ) ಸ್ವತ್ತುಗಳ ಈಗಿರುವ ರೀತಿಯಲ್ಲಿ ಆಗಲಿ ಅಥವಾ ಮಾಡಬೇಕಾದ ಕೆಲವು ಸೇರ್ಪಡೆಗಳು, ಬದಲಾವಣೆಗಳ ಅಥವಾ ಮೇಲ್ಪಾಟುಗಳನ್ನು ಕಾರ್ಯಗತಗೊಳಿಸಿದ ತರುವಾಯ ಪುನರಭಿವೃದ್ಧಿ ಯೋಜನೆಯಲ್ಲಿ ಹೊಂದುವಂಥ ಅವುಗಳ ವಿವರಣೆ;

(ಗ) ರಸ್ತೆಗಳು, ಖುಲ್ಲಾ ಜಾಗಗಳು, ನಿವೇಶನ ಅಥವಾ ನಿವೇಶನಗಳು, ಆಸ್ಪತ್ರೆಗಳು ಅಂಗಡಿ ಕೇಂದ್ರಗಳು, ಹೆರಿಗೆ ಆಸ್ಪತ್ರೆ, ಮಕ್ಕಳ ಕಲ್ಯಾಣ ಕೇಂದ್ರಗಳು ಮತ್ತು ಅದೇ ರೀತಿಯ ಸೌಕರ್ಯಗಳು;

(ಘ) ಆ ಪ್ರದೇಶದ ಸರಿಯಾದ ಅಭಿವೃದ್ಧಿಗಾಗಿ ಅವಶ್ಯವೆಂದು ಭಾವಿಸುವಂಥ ಯಾವುದೇ ಇತರ ವಿಷಯ.

## ನಮೂನೆ–1

**(ನಿಯಮ 3 (ಕ) ನೋಡಿ)**

1. ಒಡೆಯನ ಹೆಸರು
2. ಅವನು ಅದರ ಒಡೆಯನಲ್ಲದಿದ್ದರೆ, ಕಟ್ಟಡದ ಅಧಿಭೋಗದಾರನ ಹೆಸರು
3. ಕಟ್ಟಡದ ವಿವರಣೆ
4. ಇತರೆ ವಿವರಗಳು – ಯಾವುದಾದರೂ ಇದ್ದರೆ

ಅರ್ಜಿದಾರನ ರುಜು

## ನಮೂನೆ–2

## ನೋಂದಣಿ ಪ್ರಮಾಣ ಪತ್ರದ ನಮೂನೆ

**[ನಿಯಮ 4 (2)ನ್ನು ನೋಡಿ]**

ಕೆಳಗೆ ನಿರ್ದಿಷ್ಟಪಡಿಸಿದ ಕಟ್ಟಡವನ್ನು–ಪ್ರಕರಣದ ಮೇರೆಗೆ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1. ಒಡೆಯ ಅಧಿಭೋಗದಾರನ ಹೆಸರು

2. ಮುನ್ಸಿಫಲ್ ಸಂಖ್ಯೆ

3. ವಿಳಾಸ

**ನಮೂನೆ–3**

**[5ನೇ ನಿಯಮವನ್ನು ನೋಡಿ]**

1. ಭೂಮಿ ಅಥವಾ ಕಟ್ಟಡದ ಒಡೆಯನ ಹೆಸರು

2. ಕಟ್ಟಡ ಅಥವಾ ಭೂಮಿಯ ವಿವರಣೆ

3. ಇತರೆ ವಿವರಗಳು ಯಾವುದಾದರ ಇದ್ದರೆ

ಅರ್ಜಿದಾರನ ರುಜು.

## ನಮೂನೆ–4

**(5ನೇ ನಿಯಮವನ್ನು ನೋಡಿ)**

1. ಭೂಮಿ ಅಥವಾ ಕಟ್ಟಡದ ಒಡೆಯನ ಹೆಸರು

2. ಕಟ್ಟಡ ಅಥವಾ ಭೂಮಿಯ ವಿವರಣೆ

3. ಅಧಿಭೋಗಾರರನ್ನು ಹೊರದೂಡುವುದಕ್ಕಾಗಿನ ದಾವೆ ಅಥವಾ ವ್ಯವಹರಣೆಗಳನ್ನು ಹೂಡುವುದಕ್ಕೆ ಕಾರಣಗಳು

ಅರ್ಜಿದಾರನ ರುಜು.